UASB
LIBRARY
Newspaper Clippings
Pg .1 Thursday 23-12-2021 Jai Kisan



ಸಮಗ್ರ ಕೃಷಿಯಿಂದ ರೈತರ ಆದಾಯ ದ್ವಿಗುಣ

ಇಳುವರಿ ಹೆಚ್ಚಳದ ತಂತ್ರಗಳನ್ನು ವಿಶ್ಲೇಷಿಸಿದ ತಜ್ಞರು | ರೈತರಿಗೆ ಕೃಷಿತಜ್ಞರು, ಸಂಶೋಧಕರಿಂದ ಹಲವು ಸೂತ್ರ

ಸ್ವಾವಲಂಬಿ ಭಾರತದ ನಿರ್ಮಾಣದಲ್ಲಿ ರೈತರ ಕೊಡುಗೆ ಅನನ್ಯ. ಆದರೆ, ಇತ್ತೀಚಿನ ವರ್ಷಗಳಲ್ಲಿ ಕೃಷಿ ಋಷಿ ತರುವ ಬದಲು ರೈತ ಕಣ್ಣೀರು ಸುರಿಸುವಂತೆ ಮಾಡಿದೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ರೈತನನ್ನು ಸ್ವಾಭಿಮಾನಿ ಹಾಗೂ ಸ್ವಾವಲಂಬಿಯಾಗಿಸಲು ರೈತರ ಆದಾಯ ದ್ವಿಗುಣಗೊಳಿಸುವುದು ಅತ್ಯವಶ್ಯ. ಇದಕ್ಕಿರುವ ಪರಿಹಾರವೇ ಸಮಗ್ರ ಕೃಷಿ ಪದ್ಧತಿ ಎಂದು ಕೃಷಿತಜ್ಞರು, ಸಂಶೋಧಕರು ಸ್ಪಷ್ಟಪಡಿಸಿದರು. 'ರೈತದಿನ'ದ ಅಂಗವಾಗಿ 'ವಿಜಯವಾಣಿ' ತಂಡ ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಕೃಷಿತಜ್ಞರು, ಸಂಶೋಧಕರು, ಪ್ರಾಧ್ಯಾಪಕರೊಂದಿಗೆ ಸಂವಾದ ನಡೆಸಿದ ಸಂದರ್ಭದಲ್ಲಿ ವ್ಯಕ್ತವಾದ ಸ್ಪಷ್ಟ ಅಭಿಪ್ರಾಯವಿದು.



ಸಂವಾದದಲ್ಲಿ ಪಾಲ್ಗೊಂಡವರು

ಕೃಷಿ ವಿ.ವಿ.ಯ ಪ್ರೊಫೆಸರುಗಳಾದ ಡಾ.ಕೆ.ಕರುಣಾ, ಡಾ.ಬಿ.ಎಲ್.ಜಿದಾನಂದ, ಡಾ.ನಿರಂಜನಮೂರ್ತಿ, ಡಾ.ಕೆ.ಪಿ.ರಘುಪ್ರಸಾದ್ ಹಾಗೂ ಡಾ.ಕೆ.ಎನ್.ಶ್ರೀನಿವಾಸಪ್ಪ.

ವಿಜಯವಾಣಿ ಸಂವಾದ

ವಾರ್ಷಿಕ ಒಂದೋ ಎರಡೋ ಬೆಳೆ ಬೆಳೆಯುವುದರಿಂದ ರೈತರ ಆದಾಯ ದ್ವಿಗುಣವಾಗಲು ಸಾಧ್ಯವಿಲ್ಲ. ಬಹುಬೆಳೆ ಪದ್ಧತಿ, ಮೌಲ್ಯವರ್ಧನೆ, ಸಂಸ್ಕರಣೆ, ಮಾರುಕಟ್ಟೆ, ಉತ್ಪಾದನಾ ವೆಚ್ಚ ಕಡಿಮೆ ಮಾಡುವ ಉಪಕ್ರಮಗಳನ್ನು ಅನುಸರಿಸುವ ಮೂಲಕ ಆದಾಯದ್ವಿಗುಣ ಮಾಡಿಕೊಳ್ಳಬಹುದು. ಭೂ ಫಲವತ್ತತೆ ಕಾಯ್ದುಕೊಳ್ಳಲು ಮೊದಲ ಪ್ರಾಶಸ್ತ್ಯ ನೀಡಬೇಕು. ಕಾಲಕಾಲಕ್ಕೆ ಮಣ್ಣುಪರೀಕ್ಷೆ ಮಾಡಿಸಬೇಕು. ಮಣ್ಣಿಗೆ ಬೇಕಾದ ಪೋಷಕಾಂಶಗಳನ್ನು ಪೂರೈಸಬೇಕು.

ಲಘುಪೋಷಕಾಂಶಗಳ ಬಗ್ಗೆ ಗಮನ: ಭೂಮಿಯಲ್ಲಿ ಸಾಮಾನ್ಯವಾಗಿ ಲಘುಪೋಷಕಾಂಶಗಳಿರುತ್ತವೆ. ಆದರೆ, ಬೆಳೆಗೆ ಬೇಕಾದ ಲಘುಪೋಷಕಾಂಶಗಳ ಕೊರತೆ ಇರುತ್ತದೆ. ಹಾಗಾಗಿ ಭೂಮಿಗೆ ಕೊಟ್ಟಿಗೆ ಗೊಬ್ಬರ ಕೊಡುವ ಮೂಲಕ ಸೂಕ್ಷ್ಮ ಜೀವಿಗಳ ಕ್ರಿಯೆಯನ್ನು ವೃದ್ಧಿಸಬೇಕು.

ಅಗತ್ಯಕ್ಕೆ ತಕ್ಕಷ್ಟು ಬಳಕೆ: ಅತ್ಯಂತ ನಿಖರವಾಗಿ ರಸಗೊಬ್ಬರ ಹಾಗೂ ಕೀಟನಾಶಕ ಬಳಕೆ ಮಾಡಬೇಕು. ಈ ವಿಚಾರದಲ್ಲಿ ತಜ್ಞರ ಸಲಹೆ ಪಡೆಯಬೇಕೇ ಹೊರತು ವ್ಯಾಪಾರಿಗಳ ಮಾತು ಕೇಳಿ ಬೆಳೆಗೆ ರಸಗೊಬ್ಬರ/ಕೀಟನಾಶಕ ಸಿಂಪರಣೆ ಮಾಡಬಾರದು. ಅಗತ್ಯವಿದಷ್ಟೇ ರಸಗೊಬ್ಬರ, ಕೀಟನಾಶಕ ಒದಗಿಸಬೇಕು.

ಯಾಂತ್ರೀಕರಣಕ್ಕೆ ಒತ್ತು: ರೈತರು ಕೃಷಿ ಯಾಂತ್ರೀಕರಣಕ್ಕೆ ಒತ್ತು ಕೊಡಬೇಕು. ಅನಗತ್ಯ ನೀರು ಬಳಕೆ, ಪರಿಕರ, ಅತಿಯಾದ ಗೊಬ್ಬರ ಬಳಕೆ ಕೈಬಿಡಬೇಕು. ಬೆಳೆಯ ಅಗತ್ಯತೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಸಣ್ಣ ಹಿಡುವಳಿದಾರರು ಸ್ವಂತ ಬಂಡವಾಳ ಹೂಡಿ ದೊಡ್ಡ ಯಂತ್ರೋಪಕರಣ ಖರೀದಿ ಮಾಡಬಾರದು. ವರ್ಷದಲ್ಲಿ ಕೆಲವೇ ಕೆಲವು ದಿನ ಬಳಸುವ (ಟ್ರ್ಯಾಕ್ಟರ್, ಟಿಲ್ಲರ್)ಯಂತ್ರಗಳನ್ನು ಸ್ವಂತ ಖರೀದಿ ಮಾಡುವ ಬದಲು ಬಾಡಿಗೆ ರೂಪದಲ್ಲಿ ಪಡೆದು ಬಳಸಬೇಕು. ಇದರಿಂದ ರೈತರಿಗೆ ಹೆಚ್ಚಿನ ಉಳಿತಾಯವಾಗುತ್ತದೆ.

ಕೃಷಿ ಯಂತ್ರಧಾರೆ ಬಲವರ್ಧನೆ

ಸಣ್ಣ ಮತ್ತು ಮಧ್ಯಮ ವರ್ಗದ ರೈತರ ಕೃಷಿ ಕಾಯಕಕ್ಕೆ ಆಧುನಿಕ ಯಂತ್ರಗಳು ದೊರೆಯುವಂತಾಗಲಿ ಎಂಬ ಉದ್ದೇಶದಿಂದ ಸರ್ಕಾರ ಕೃಷಿ ಯಂತ್ರಧಾರೆ ಯೋಜನೆ ಜಾರಿಗೊಳಿಸಿದೆ. ರಾಜ್ಯದಲ್ಲಿ ಆಂತಹ 324 ಕೇಂದ್ರಗಳಿವೆ. ಈ ಕೇಂದ್ರಗಳನ್ನು ಸರ್ಕಾರ ಮತ್ತಷ್ಟು ಬಲಪಡಿಸುವ ಮೂಲಕ ರೈತರಿಗೆ ನೆರವಾಗಬೇಕು.

ಒಂದು ಜಿಲ್ಲೆ, ಒಂದು ಉತ್ಪನ್ನ

ಆತ್ಮನಿರ್ಭರ ಯೋಜನೆಯಡಿ ಕೇಂದ್ರ ಸರ್ಕಾರ ಒಂದು ಜಿಲ್ಲೆ, ಒಂದು ಉತ್ಪನ್ನ ಕಾರ್ಯಕ್ರಮ ರೂಪಿಸಿದೆ. ರಾಜ್ಯದಲ್ಲಿ ಕೃಷಿ ಹವಾಮಾನದ 10 ವಲಯಗಳನ್ನು ಗುರುತಿಸಿದ್ದು, ಆ ಪೈಕಿ 4 ವಲಯಗಳು ಜಿಕೆವಿಕೆ ವ್ಯಾಪ್ತಿಗೆ ಒಳಪಡುತ್ತವೆ. ಹಾಸನ ಜಿಲ್ಲೆಯಲ್ಲಿ ತೆಂಗು ಮತ್ತು ಶುಂಠಿ, ಮಂಡ್ಯದಲ್ಲಿ ಕಬ್ಬು, ಚಾಮರಾಜನಗರದಲ್ಲಿ ಅರಿಶಿಣ, ಚಿಂತಾಮಣಿ ಮತ್ತು ಕೋಲಾರ ಜಿಲ್ಲೆಯಲ್ಲಿ ಟೊಮೆಟೋ ಬೆಳೆಗಳನ್ನು ಗುರುತಿಸಲಾಗಿದೆ. ಈ ಉತ್ಪನ್ನಗಳ ಬಗ್ಗೆ ವಿಶ್ವವಿದ್ಯಾಲಯ ಹೆಚ್ಚಿನ ಸಂಶೋಧನೆ, ಮೌಲ್ಯವರ್ಧನೆ, ಮಾರುಕಟ್ಟೆ ಮತ್ತಿತರ ವಿಷಯಗಳ ಕುರಿತು ಅಧ್ಯಯನ ಮಾಡಲಿದೆ.

ನಿಶ್ಚಿತ ಆದಾಯ...

ರೈತರು ನಿಶ್ಚಿತ ಆದಾಯ ಪಡೆಯುವ ನಿಟ್ಟಿನಲ್ಲಿ ಆರಣ್ಯ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕು. ತಮ್ಮ ಜಮೀನಿನ ಬದುಗಳಲ್ಲಿ ಮಹಾಗನಿ, ಸಾರ್ವೆ ಮರ, ತೇಗ, ಬಿದಿರು, ಬೇವು, ಹೆಬ್ಬೇವು ಮತ್ತಿತರ ಬಹುವಾರ್ಷಿಕ ಬೆಳೆ ಬೆಳೆಯುವ ಮೂಲಕ ನಿಶ್ಚಿತ ಆದಾಯವನ್ನು ಪಡೆಯಬೇಕು. ಆ ಮೂಲಕ ಕೃಷಿಯನ್ನು ಲಾಭದಾಯಕವಾಗಿಸಿಕೊಳ್ಳಬೇಕು.

ಹವಾಮಾನಕ್ಕೆ ಪೂರಕ

ಇತ್ತೀಚಿನ ದಿನಗಳಲ್ಲಿ ಹವಾಮಾನ ವೈಪರೀತ್ಯದಿಂದ ಮಳೆ ಬೀಳುವ ಅವಧಿ ಹಾಗೂ ಪ್ರಮಾಣದಲ್ಲಿ ಏರುಪೇರಾಗಿದೆ. ಹಾಗಾಗಿ ಆದಕ್ಕೆ ಪೂರಕವಾಗಿ ಅಲ್ಪಾವಧಿ ಮತ್ತು ದೀರ್ಘಾವಧಿ ಬೆಳೆಗಳನ್ನು ಆಯ್ಕೆ ಮಾಡಿಕೊಂಡು ಹವಾಮಾನ ಚತುರ ಕೃಷಿ ಮಾಡುವ ಮೂಲಕ ರೈತರು ಆದಾಯ ಪಡೆದುಕೊಳ್ಳಬೇಕು.



ರೈತರು ಆದಾಯ ಹೆಚ್ಚಿಸಿಕೊಳ್ಳಲು ಪ್ರಾಥಮಿಕ ಕೃಷಿಯೊಂದಿಗೆ ಮಾಧ್ಯಮಿಕ ಕೃಷಿಯನ್ನು ಅನುಸರಿಸುವುದು ಅನಿವಾರ್ಯ. ಮಾಧ್ಯಮಿಕ ಕೃಷಿಯಲ್ಲಿ ಪ್ರಾಥಮಿಕ ಮತ್ತು ನಂತರದ ಸಂಸ್ಕರಣೆಯ ವಿಭಾಗಗಳನ್ನು ಸಂಪರ್ಕಿಸಬೇಕು. ಮೌಲ್ಯವರ್ಧಿತ ಪದಾರ್ಥಗಳ ಬೇಡಿಕೆಯನುಸಾರ ಬೇರೆ-ಬೇರೆ ಪ್ರಾಥಮಿಕ ಕೃಷಿ ಉತ್ಪನ್ನಗಳನ್ನು ಉತ್ತೇಜಿಸಬೇಕು. ಅದರಿಂದ ರೈತರು ಬೆಳೆಯುವ ಸಾಮರ್ಥ್ಯ ವೃದ್ಧಿಯಾಗುತ್ತದೆ. ಸಿರಿಧಾನ್ಯಗಳು, ಉಪ ಉತ್ಪನ್ನಗಳ ಬಳಕೆ, ಔಷಧೀಯ ಮತ್ತು ಸುಗಂಧ ಸಸ್ಯಗಳನ್ನು ಬೆಳೆಯಲು ಮತ್ತು ಬಳಸಲು ಪ್ರೇರೇಪಿಸಬೇಕು ಮತ್ತು ಅವುಗಳ ಬೇಡಿಕೆ ಹೆಚ್ಚಿಸಬೇಕು. ಹಳ್ಳಿಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕು. ಸಂಸ್ಕರಿಸಿದ ಉತ್ಪನ್ನಗಳ ಪೂರೈಕೆ ಸರಪಳಿಯನ್ನು ಸಮರ್ಥವಾಗಿ ನಿರ್ವಹಣೆ ಮಾಡಬೇಕು. ಸಾಗಾಣಿಕೆ ವೆಚ್ಚವನ್ನು ಕಡಿಮೆ ಮಾಡಲು ಪ್ರಾಥಮಿಕ ಉತ್ಪನ್ನಗಳ ಮಾರುಕಟ್ಟೆ ವಿಸ್ತರಿಸಬೇಕು. ಮಾಧ್ಯಮಿಕ ಕೃಷಿ ದೇಶದ ಆರ್ಥಿಕತೆ ಸುಧಾರಿಸುವಲ್ಲಿ, ಬಲಗೊಳಿಸುವಲ್ಲಿ ಉದಯಿಸುತ್ತಿರುವ ವಲಯವಾಗಿದೆ. ಕೃಷಿ ಉತ್ಪನ್ನಗಳ ಸಂಸ್ಕರಣೆ ಕಡಿಮೆ ಇರುವುದರಿಂದ ಈ ವಲಯಕ್ಕೆ ಹೆಚ್ಚು ಪ್ರಾಮುಖ್ಯ ನೀಡುವುದು ಅತ್ಯವಶ್ಯ. ಈ ನಿಟ್ಟಿನಲ್ಲಿ ನಿರಂತರ ಪ್ರಯತ್ನಗಳಾಗಬೇಕು. ಸುಸ್ಥಿರ ಕೃಷಿ ಸಾಧ್ಯವಾಗಿ ರೈತ ಸ್ವಾಭಿಮಾನಿ ಹಾಗೂ ಸ್ವಾವಲಂಬಿ ಬದುಕು ಸಾಗಿಸಬೇಕು.

| ಎಸ್. ರಾಜೇಂದ್ರ ಪ್ರಸಾದ್
ಕುಲಪತಿ, ಬೆಂಗಳೂರು ಕೃಷಿ ವಿವಿ



ಸಮಗ್ರ ಕೃಷಿಯಲ್ಲಿ ಪ್ರವೀಣ



ತೋಟಗಾರಿಕೆಯಲ್ಲಿ ಬಿಎಸ್ಸಿ ಪದವಿ ಪಡೆದಿರುವ ವಿಜಯಪುರ ಜಿಲ್ಲೆ ಕೊಲ್ಹಾರ ತಾಲೂಕು ತಡಲಗಿ ಗ್ರಾಮದ ಯುವ ರೈತ ಪ್ರವೀಣ ಬಾಳಿಗೇರಿ, 10 ಎಕರೆ ಜಮೀನಿನಲ್ಲಿ ಸಮಗ್ರ ಕೃಷಿ ಮಾಡುವ ಮೂಲಕ ಬರದ ಜಿಲ್ಲೆಗೆ ಮಾದರಿ ಯುವ ರೈತರಾಗಿದ್ದಾರೆ. ಎರಡು ಎಕರೆಯಲ್ಲಿ ಬಾಳೆ, ಎರಡು ಎಕರೆ ಸೀತಾಫಲ, ಎರಡು ಎಕರೆಯಲ್ಲಿ ಆರಣ್ಯ ಕೃಷಿ (ಮಹಾಗನಿ, ಹೆಬ್ಬೇವು, ತೆಂಗು ಮತ್ತು ವಿವಿಧ ಮೇವಿನ ಬೆಳೆ) ಬೆಳೆದಿದ್ದಾರೆ. ಅಲ್ಲದೆ ತೋಟಗಾರಿಕೆ ಬೆಳೆಗಳಾದ ಮಾವು, ಲಿಂಬೆ, ಚಿಕ್ಕು, ಹನುಮಫಲ, ನುಗ್ಗೆ, ಕರಿಬೇವು,ದಾಳಿಂಬೆ, ಅಂಜೂರ, ಹಲಸು ಕೂಡ ಬೆಳೆದಿದ್ದಾರೆ. ನಾಲ್ಕು ಎಕರೆಯಲ್ಲಿ ಕಬ್ಬು ಬೆಳೆದಿದ್ದು ವಾರ್ಷಿಕ 10 ಲಕ್ಷ ರೂ. ಆದಾಯ ಗಳಿಸುತ್ತಿದ್ದಾರೆ. ಕೃಷಿಯಲ್ಲಿ ನೂತನ ತಂತ್ರಜ್ಞಾನ ಅಳವಡಿಸಿಕೊಂಡಿದ್ದು, ಅಧಿಕ ಸಾಂದ್ರ ಬೇಸಾಯ ಹಾಗೂ ಸಂರಕ್ಷಿತ ಬೇಸಾಯ ಪದ್ಧತಿಯಡಿ ಕೃಷಿ ಮಾಡುತ್ತಿದ್ದಾರೆ. ಕೃಷಿ ಜತೆಗೆ ಉಪಕಸುಬುಗಳಾದ ಕೋಳಿ ಸಾಕಣೆ, ಕುರಿ ಸಾಕಣೆ ಹಾಗೂ ವಿವಿಧ ಹಣ್ಣಿನ ನರ್ಸರಿಯಿಂದಲೂ ಆದಾಯ ಗಳಿಸುತ್ತಿದ್ದಾರೆ. 200 ನಾಟಿ ಕೋಳಿ, 40 ಆಡು, 25 ಟಗರು ಸಾಕಿದ್ದಾರೆ. ಇವರ ಸಾಧನೆ ಗುರುತಿಸಿ ಬಾಗಲಕೋಟೆ ತೋಟಗಾರಿಕೆ ವಿವಿ 2020ನೇ ಸಾಲಿನ 'ಫಲಶ್ರೇಷ್ಠ' ಪ್ರಶಸ್ತಿ ನೀಡಿ ಗೌರವಿಸಿದೆ.

ಓಂಕಾರಪ್ಪ ದುಡಿಮೆಗೆ ಪ್ರತಿಫಲ!



ಸಮಗ್ರ ಕೃಷಿಯಲ್ಲಿ ಬೆಳೆದ ಉತ್ಪನ್ನಗಳನ್ನು ತಾವೇ ಮಾರುಕಟ್ಟೆ ಮಾಡುವ ಮೂಲಕ ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲೂಕು ಮಲ್ಲಾಪುರದ ಓಂಕಾರಪ್ಪ ಇತರರಿಗೂ ಮಾದರಿಯಾದ ರೈತ. ಇವರಿಗೆ 4 ಎಕರೆ ಜಮೀನಿದ್ದು, 10ಕ್ಕೂ ಅಧಿಕ ಬೆಳೆ ಬೆಳೆಯಲಾಗಿದೆ. ಇವರ ಪತ್ನಿ ಮೀನಾಕ್ಷಮ್ಮ. ತಿಪ್ಪೆಯಲ್ಲಿದ್ದ ಮಾವಿನ ಸಸಿಯನ್ನು ಜಮೀನಿನಲ್ಲಿ ನೆಟ್ಟಾಗ ಭರಪೂರ ಫಲ ಸಿಕ್ಕಿತು. ಆ ವರ್ಷವೇ 150 ಗಿಡ ನೆಟ್ಟರು. ಬಳಿಕ ಒಂದೊಂದಾಗಿ ಇತರ ಬೆಳೆಗಳನ್ನು ಹಾಕುವ ಮೂಲಕ ಭೂಮಿಯನ್ನು ಫಲಭರಿತ ಮಾಡಿದ್ದಾರೆ. 75 ಸಪೋಟ, 150 ತೇಗ, 200 ಸಿಲ್ವರ್ ಓಕ್, 200 ಶ್ರೀಗಂಧ, 2 ನೆಲ್ಲಿ, 10 ಮೂಸಂಬಿ, 10 ಪೇರಲ, 15 ಹುಣಸೆ ಗಿಡ, 250 ಆಡಕೆ, 100 ಜಂಬೂನೇರಳೆ ಹಾಗೂ 250 ತೆಂಗಿನ ಮರಗಳನ್ನು ಬೆಳೆಸಿದ್ದಾರೆ. ಇವುಗಳ ಮಧ್ಯೆ ತರಕಾರಿ, ಸೊಪ್ಪು ಹಾಕಿದ್ದು, ಕೊಟ್ಟಿಗೆ, ಸಾವಯವ ಗೊಬ್ಬರ ಹಾಕಿ ಪೋಷಿಸಿದ್ದಾರೆ. ಪ್ರತಿ ವಾರವೂ ತಾವೇ ಸಂತೆಗೆ ತಂದು ಮಾರಾಟ ಮಾಡುತ್ತಾರೆ. ಸಮಗ್ರ ಕೃಷಿ ಪದ್ಧತಿ ಮತ್ತು ಬೆಳೆಗಳ ವೈವಿಧ್ಯತೆಗೆ 2011-12ರಲ್ಲಿ ಕೃಷಿ ಪಂಡಿತ ಪ್ರಶಸ್ತಿ, ದಾವಣಗೆರೆ, ಕೊಪ್ಪಳ ಜಿಲ್ಲಾ ಕೃಷಿ ಇಲಾಖೆಯಿಂದ 2010, 2016ರಲ್ಲಿ ವಿವಿಧ ಪ್ರಶಸ್ತಿಗಳಿಗೆ ಇವರು ಭಾಜನರಾಗಿದ್ದಾರೆ.

23-12-2021 Vv Pg 06

For more information visit
University Library Website
Web - uasbagrilibindia.org
E-mail- librarian@uasbangalore.edu.in

ರೈತ ದಿನದ ಅಂಗವಾಗಿ ಜಿಕೆವಿಕೆ ವಿಜ್ಞಾನಿಗಳೊಡನೆ ಸಂವಾದ

ಮಣ್ಣುಪರೀಕ್ಷೆ ಲಾಭದಾಯಕ

■ ಡಾ.ಕೆ.ಎನ್. ಶ್ರೀನಿವಾಸಪ್ಪ ತೋಟಗಾರಿಕೆ ಪ್ರಾಧ್ಯಾಪಕ



ಕೃಷಿ ಭೂಮಿ ಹೊಂದಿರುವ ಪ್ರತಿಯೊಬ್ಬ ರೈತರೂ ಪ್ರತಿ 3 ವರ್ಷಕ್ಕೊಮ್ಮೆ ಮಣ್ಣುಪರೀಕ್ಷೆ ಮಾಡಬೇಕು. ಇದರಲ್ಲಿ ಏಕವಾರ್ಷಿಕ ಬೆಳೆ ಮತ್ತು ಬಹುವಾರ್ಷಿಕ ಬೆಳೆ ಪದ್ಧತಿಗೆ ಅನುಗುಣವಾಗಿ ಪರೀಕ್ಷೆ ಮಾಡಿಸಬೇಕು. ಏಕವಾರ್ಷಿಕ ಬೆಳೆಗೆ ಭೂಮಿಯ ಮೇಲ್ಪದರ 45 ಸೆ.ಮೀ ಮಣ್ಣನ್ನು ಸರಿಸಿ ಅಲ್ಲಿಂದ ಅರ್ಧ ಅಡಿ ಆಳಕ್ಕೆ 'ವಿ' ಆಕಾರದಲ್ಲಿ ಗುಂಡಿ ತೋಡಬೇಕು. ಗುಂಡಿಯಲ್ಲಿದ್ದ ಮಣ್ಣನ್ನು ಹೊರತೆಗೆದು, ಸುತ್ತಲಿನ ಅರ್ಧ ಇಂಚು ಮಣ್ಣಿನ ಪದರವನ್ನು ತೆಗೆದು ಸಂಗ್ರಹಿಸಬೇಕು. ಇಡೀ ಜಮೀನಿನಲ್ಲಿ ಝಿಡ್ ಮಾದರಿ ಅಥವಾ ಜಿಗ್‌ಜಾಗ್ ಮಾದರಿಯಲ್ಲಿ 4 ರಿಂದ 5 ಸ್ಥಳಗಳಲ್ಲಿ ಗುಂಡಿ ತೋಡಿ ಇದೇ ಮಾದರಿಯಲ್ಲಿ ಮಣ್ಣು ಒಂದೆಡೆ ಸಂಗ್ರಹಿಸಬೇಕು. ಒಂದೆಡೆ ಸಂಗ್ರಹಿಸಿದ ಮಣ್ಣನ್ನು ಒಂದು ಚೀಲದ ಮೇಲೆ ಮಿಶ್ರಣ ಮಾಡಿ, ಅದನ್ನು ವೃತ್ತಾಕಾರದಲ್ಲಿ ಹರಡಿ 4 ಭಾಗ ಮಾಡಿ ಅರ್ಧಭಾಗ ಇಟ್ಟುಕೊಳ್ಳಬೇಕು. ಇದೇ ಮಾದರಿಯನ್ನು ಪುನರಾವರ್ತನೆ ಮಾಡಿ ಅರ್ಧ ಕೆ.ಜಿ. ಮಣ್ಣನ್ನು ಪರೀಕ್ಷೆ ಕೇಂದ್ರಕ್ಕೆ ತೆಗೆದುಕೊಂಡು ಹೋಗಬೇಕು.

ಹೀಗಿರಲಿ ಬೆಳೆಪದ್ಧತಿ...

ಹವಾಮಾನಕ್ಕೆ ಅನುಗುಣವಾಗಿ ಬೆಳೆಪದ್ಧತಿಯನ್ನು ಬದಲಿಸಿಕೊಳ್ಳಬೇಕು. ಪೂರ್ವ ಮುಂಗಾರು ಮೇನಲ್ಲಿ ಆರಂಭವಾದರೆ 4 ತಿಂಗಳಿನ ಬೆಳೆಗಳನ್ನು ಬೆಳೆಯಬೇಕು. ಮಳೆ ತಡವಾದಲ್ಲಿ 2 ರಿಂದ 3 ತಿಂಗಳ ಬೆಳೆಗಳನ್ನು ಬೆಳೆಯಬೇಕು. ಅಲಸಂದೆ, ಹುರುಳಿ, ಕಡಲೆ, ಮೆಕ್ಕೆಜೋಳ, ತೊಗರಿ, ಹತ್ತಿ, ಮೆಣಸಿನಕಾಯಿ, ಈರುಳ್ಳಿ ಸೇರಿ ವಿವಿಧ ಬೆಳೆಗಳನ್ನು ಬೆಳೆಯುವುದು ಸೂಕ್ತ.



ಬಿದಿರು ಕೃಷಿಗೆ ಉತ್ತೇಜನ



■ ಡಾ. ಬಿ.ಎಲ್. ಚಿದಾನಂದ ಪ್ರಾಧ್ಯಾಪಕ ಪ್ರಾಣಿಶಾಸ್ತ್ರ

ಎಲ್ಲ ಬಗೆಯ ಸಸ್ಯಪ್ರಭೇದಗಳಲ್ಲಿ ವೇಗವಾಗಿ ಬೆಳೆಯುವ ಮತ್ತು ರೈತರಿಗೆ ಕಡಿಮೆ ಅವಧಿಯಲ್ಲಿ ಹೆಚ್ಚಿನ ಲಾಭ ತರುವ ಬಿದಿರು ಬೆಳೆಯಲು ಪೂರಕ ಯೋಜನೆ ಸಿದ್ಧಪಡಿಸಲಾಗಿದೆ. 2007ರಲ್ಲಿ ಬಿದಿರನ್ನು ಅರಣ್ಯ ಬೆಳೆಯ ಪಟ್ಟಿಯಿಂದ ಹೊರಗಿಟ್ಟು, ಸಾಮಾನ್ಯ ಕೃಷಿಯ ಬೆಳೆಯನ್ನಾಗಿ ಪರಿಗಣಿಸಲಾಗಿದೆ. ಹೀಗಾಗಿ, ಬಿದಿರನ್ನು ಕಡಿಯಲು, ಸಾಗಣೆ ಮಾಡಲು ಮತ್ತು ಮಾರಾಟ ಮಾಡಲು ಯಾವುದೇ ಅಡ್ಡಿ, ಆತಂಕವಿಲ್ಲ. ಆದ್ದರಿಂದ ರೈತರು ಕಡಿಮೆ ಜಮೀನಿನಲ್ಲಿ, ಕಡಿಮೆ ಸಮಯದಲ್ಲಿ ಅತ್ಯಧಿಕ ಆದಾಯ ಗಳಿಸಲು ನೆರವಾಗುವಂತೆ ಬಿದಿರು ಬೆಳೆಯಲು ಪ್ರೋತ್ಸಾಹ ನೀಡಲಾಗುತ್ತಿದೆ. ಬಿದಿರು ಮುಳ್ಳಿನ ಸಸ್ಯವಾಗಿದ್ದು, ಕಟಾವು ಕಷ್ಟವಾಗಲಿದೆ ಎಂದು ಹಿಂಜರಿಯದಂತೆ ಮುಳ್ಳಿಲ್ಲದ ತಳಿ ಸಂಶೋಧಿಸಲಾಗಿದೆ. ಸರ್ಕಾರದಿಂದ ಬಡ್ಡಿರಹಿತ ಸಾಲ ನೀಡಿಕೆ ಸೇರಿ ಕೆಲವು ಯೋಜನೆಗಳು ಪ್ರಗತಿ ಹಂತದಲ್ಲಿದ್ದು, ಶೀಘ್ರ ಯೋಜನೆ ಜಾರಿಯಾಗುವ ಸಾಧ್ಯತೆಯಿದೆ.

ಜಗತ್ತಿನಲ್ಲಿ 1,500ಕ್ಕೂ ಅಧಿಕ ಬಿದಿರು ತಳಿಯಿದ್ದು, ಈ ಪೈಕಿ ನಮ್ಮ ದೇಶದಲ್ಲಿ 150 ತಳಿಗಳಿವೆ. ಜಿಕೆವಿಕೆ ಆವರಣದಲ್ಲಿ 6 ಹೊಸ ತಳಿಯ ಬಿದಿರು ಬೆಳೆಯಲಾಗುತ್ತಿದೆ. ಇವುಗಳಲ್ಲಿ ಮುಳ್ಳುಗಳಿಲ್ಲದ 'ಭೀಮಾ ಬಂಬೂ' ವೇಗವಾಗಿ ಬೆಳೆಯುವ ತಳಿಯಾಗಿದೆ. 1 ಎಕರೆ ವಿಸ್ತೀರ್ಣದಲ್ಲಿ 15 ಅಡಿಗೆ ಒಂದು ಸಾಲಿನಂತೆ, 5ರಿಂದ 6 ಅಡಿಗೆ ಒಂದು ಗಿಡವನ್ನು ನಾಟಿ ಮಾಡಬೇಕು. ಒಂದು ಎಕರೆಯಲ್ಲಿ 900ರಿಂದ 1 ಸಾವಿರ ಗಿಡ ನಾಟಿ ಮಾಡಬಹುದಾಗಿದೆ. 3 ವರ್ಷಕ್ಕೆ ಕಟಾವಿಗೆ ಬರಲಿದ್ದು, 30 ರಿಂದ 40 ಟನ್ ಇಳುವರಿ ಬರುತ್ತದೆ. ಕನಿಷ್ಠ 5 ಸಾವಿರ ರೂ.ನಂತೆ ಟನ್ ಬಿದಿರು ಮಾರಾಟ ಮಾಡಿದರೂ 2 ಲಕ್ಷಕ್ಕಿಂತ ಅಧಿಕ ಆದಾಯ ಗಳಿಸಬಹುದು.



ಪಶುಸಂಗೋಪನೆ

ರೈತರು ಕೃಷಿಯ ಜತೆಗೆ ಪಶುಸಂಗೋಪನೆ ಭಾಗವಾಗಿ ಕೋಳಿಸಾಕಣೆ, ಮೀನುಸಾಕಣೆ, ಕುರಿ-ಮೇಕೆ ಸಾಕಣೆ ಸೇರಿದಂತೆ ಸಮಗ್ರ ಕೃಷಿಯನ್ನು ಆಳವಡಿಕೆ ಮಾಡಿಕೊಳ್ಳಬೇಕು. ಪಶುಸಂಗೋಪನೆ ಎಂದಾಕ್ಷಣ ಅತಿ ಹೆಚ್ಚು ಎಚ್‌ಎಫ್ ತಳಿಗಳ ಕಡೆಗೆ ಮುಖಮಾಡದೆ ದೇಸಿ ತಳಿಗಳನ್ನು ಬಳಕೆ ಮಾಡಬೇಕು. ದೇಸಿ ತಳಿ ಹಸುಗಳ ಹಾಲು ಹೆಚ್ಚಾಗಿ ಬರದಿದ್ದರೂ ಹಾಲು ಹೆಚ್ಚು ಪೋಷಕಾಂಶದಿಂದ ಕೂಡಿರುತ್ತದೆ. ಹಳ್ಳಿಕಾರ್, ಮಲೆನಾಡಿನ ಗಿಡ್ಡ, ಅಮೃತ್‌ಮಹಲ್, ಸಾಹಿವಲ್, ಗುಜರಾತ್‌ನ ಗಿರ್ ತಳಿ, ಪುಂಗನೂರ್ ಎಂಬ ಹಲವು ತಳಿಗಳಿವೆ. ಬ್ರೆಜಿಲ್‌ನಲ್ಲಿ ಅತಿಹೆಚ್ಚು ಹಾಲು ಕೊಡುವ ಹಸು ಮತ್ತು ಹೋರಿಗಳ ಮೂಲ ತಳಿ ನಮ್ಮ ದೇಶದ್ದಾಗಿದೆ. ಈಗ ನಮ್ಮ ದೇಶಕ್ಕೆ ತಳಿಯನ್ನು ಕೊಡುವುದಾಗಿ ಮುಂದೆ ಬರುತ್ತಿದೆ.

ಜಿಲ್ಲೆಗೊಂದು ಬೆಳೆ



■ ಡಾ.ನಿರಂಜನ ಮೂರ್ತಿ ಸಹ ಸಂಶೋಧನಾ ನಿರ್ದೇಶಕ

ದೇಶದಲ್ಲಿ ಈಗಾಗಲೇ 'ಜಿಲ್ಲೆಗೊಂದು ಬೆಳೆ' ಎಂಬ ವಿಶೇಷ ಯೋಜನೆಯನ್ನು ಕೇಂದ್ರ ಸರ್ಕಾರ ಘೋಷಣೆ ಮಾಡಿದೆ. ಆಯಾ ಜಿಲ್ಲಾ ವ್ಯಾಪ್ತಿಯಲ್ಲಿ ಅತಿಹೆಚ್ಚು ಬೆಳೆಯುವ ಬೆಳೆ ಮತ್ತು ವಾತಾವರಣಕ್ಕೆ ಅನುಗುಣವಾಗಿ ಯಾವ ಬೆಳೆ ಸೂಕ್ತ ಎಂಬುದರ ಆಧಾರದ ಮೇಲೆ 'ಒಂದು ಜಿಲ್ಲೆ ಒಂದು ಉತ್ಪಾದನೆ (ಒನ್ ಡಿಸ್ಟ್ರಿಕ್ಟ್ ಒನ್ ಪ್ರಾಡಕ್ಟ್- ಒಡಿಒಪಿ)' ಯೋಜನೆ ಜಾರಿಗೆ ತರಲಾಗುತ್ತಿದೆ. ಚಾಮರಾಜನಗರ ಅರಿಶಿಣ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಟೊಮ್ಯಾಟೋ, ರಾಮನಗರ ರೇಷ್ಮೆ, ತುಮಕೂರು ತೆಂಗು ಸೇರಿ ಹಲವು ಬೆಲೆಗಳು ಹಂಚಿಕೆಯಾಗಿವೆ. ಬೆಳೆಗೆ ಅನುಗುಣವಾಗಿ ಬೆಳೆ ಕಟಾವು ಯಂತ್ರ, ಔಷಧ ಸಿಂಪಡಣೆ, ಸಂಸ್ಕರಣ ಘಟಕ, ಸಂಗ್ರಹಣೆಗೆ ಘಟಕ, ಪ್ಯಾಕೇಜಿಂಗ್ ಮತ್ತು ಗ್ರಾಹಕರಿಗೆ ತಲುಪವ ರೀತಿ ಮಾರುಕಟ್ಟೆ ವ್ಯವಸ್ಥೆ ಮಾಡಲಾಗುತ್ತದೆ.

ಆರ್ಯ ಯೋಜನೆ

ದೇಶದಲ್ಲಿ ಗ್ರಾಮೀಣ ಭಾಗದ ಯುವ ರೈತರು ಕೃಷಿಯಿಂದ ವಿಮುಕ್ತರಾಗಿ ನಗರಗಳತ್ತ ವಲಸೆ ಹೋಗುವುದನ್ನು ತಡೆಯಲು ಪೈಲಟ್ ಪ್ರಾಜೆಕ್ಟ್ ಮಾದರಿಯಲ್ಲಿ ಆಗ್ಮೆಂಟಿಂಗ್ ಆಂಡ್ ರಿಟೇನಿಂಗ್ ಯೂತ್ಸ್ ಇನ್ ಅಗ್ರಿಕಲ್ಚರ್ (ಎಆರ್‌ವೈಎ) ಯೋಜನೆ ಜಾರಿಗೆ ತರಲಾಗಿದೆ. ರಾಜ್ಯದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಾಡೋನಹಳ್ಳಿಯಲ್ಲಿರುವ ಕೃಷಿ ವಿಜ್ಞಾನ ಕೇಂದ್ರದಲ್ಲಿ ಯೋಜನೆ ಚಾಲ್ತಿಯಲ್ಲಿದ್ದು, ಯುವ ರೈತರಿಗೆ ತರಬೇತಿ ನೀಡಲಾಗುತ್ತಿದೆ. ಇಲ್ಲಿ ಕೃಷಿ ಬೆಳೆಗಳನ್ನು ಬೆಳೆಯುವುದು, ನೀರಾವರಿ ಪದ್ಧತಿ, ಬೆಳೆ ಸಂರಕ್ಷಣೆ, ಬೆಳೆ ಕಟಾವು, ಬೆಳೆದ ಉತ್ಪನ್ನಗಳ ಮೌಲ್ಯವರ್ಧನೆ ಹಾಗೂ ಮಾರುಕಟ್ಟೆ (ಬಳಕೆದಾರರು, ಕಂಪನಿಗಳು, ಗ್ರಾಹಕರು)ಗೆ ನೇರ ಮಾರಾಟ ಮಾಡುವ ವ್ಯವಸ್ಥೆ ಬಗ್ಗೆ ತಿಳಿಸಲಾಗುತ್ತದೆ.



ಬದುಗಳ ಮೇಲೆ ಮರ ನೆಡಿ



■ ಡಾ.ಕೆ.ಪಿ. ರಘುಪ್ರಸಾದ್ ಪ್ರಾಧ್ಯಾಪಕ ಕೃಷಿ ವಿಸ್ತರಣೆ

ಕೃಷಿ ಜಮೀನಿನಲ್ಲಿ ಬೆಳೆಗಳ ಜತೆಗೆ, ಅರಣ್ಯ ಕೃಷಿಯ ಮಾದರಿಗಳಲ್ಲಿ ಮರಗಳನ್ನು ಬೆಳೆಸಲು ಅವಕಾಶವಿದೆ. ಬದುಗಳಲ್ಲಿ ಸುತ್ತಲೂ ಮರವಾಗಿ ಬೆಳೆಯುವ ಸಸಿಗಳನ್ನು ನಾಟಿ ಮಾಡಬೇಕು. ಬೇವು, ತೇಗ, ಸಾಗುವಾನಿ, ಮಹಾಗನಿ, ಸಿಲ್ವರ್ ಓಕ್, ಶ್ರೀಗಂಧ, ಹೆಬ್ಬೇವು ಸೇರಿ ಹಲವು ಜಾತಿಯ ಮರಗಳನ್ನು ಬೆಳೆಸಬೇಕು. ಇದರಿಂದ ಸಾಮಾನ್ಯ ದಿನಗಳಲ್ಲಿ ಬೆಳೆಗಳ ಜತೆಗೆ, 3 ರಿಂದ 5 ವರ್ಷಕ್ಕೊಮ್ಮೆ ಮರಗಳನ್ನು ಕಟಾವು ಮಾಡಿ ಲಾಭವನ್ನೂ ಗಳಿಸಬಹುದು. ಇದರಿಂದ ಬದುವಿನ ಸಂರಕ್ಷಣೆ ಜತೆಗೆ, ಲಾಭವೂ ಸಿಗುತ್ತದೆ.



ನಮ್ಮದು ರೈತಪರ ಸರ್ಕಾರ.

ರೈತರ ಏಳ್ಗೆಗೆ ಪೂರಕ ಕಾರ್ಯಕ್ರಮ ರೂಪಿಸುತ್ತದೆ. ಹಾಗಾಗಿ ರೈತರು ಯಾವುದೇ ಕಾರಣಕ್ಕೂ ಎದೆಗುಂದಬಾರದು. ಕೃಷಿ ಅಭಿವೃದ್ಧಿಯಲ್ಲಿ ಕರ್ನಾಟಕ ದೇಶದಲ್ಲಿಯೇ ಮೊದಲ ಸ್ಥಾನ ಪಡೆದಿದೆ. ಪ್ರಧಾನಿ ನರೇಂದ್ರ ಮೋದಿ ಆಶಯದಂತೆ ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಟ್ಟಿದ್ದೇವೆ. ಅತಿವೃಷ್ಟಿಯಿಂದ ಹಾನಿಗೀಡಾದ ರೈತರ ಬೆಳೆಗಳಿಗೆ ನೀಡಲಾಗುತ್ತಿರುವ ಪರಿಹಾರದ ಮೊತ್ತವನ್ನು ದ್ವಿಗುಣಗೊಳಿಸಿದ್ದೇವೆ. ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ಒಣಭೂಮಿ ಬೇಸಾಯದ ಜಮೀನಿನಲ್ಲಿ ಸಂಭವಿಸಿದ ಬೆಳೆಹಾನಿಗೆ ಪ್ರತಿ ಹೆಕ್ಟೇರ್‌ಗೆ 6,800 ರೂ.ಗೆ ರಾಜ್ಯ ಸರ್ಕಾರ ಇನ್ನೂ 6,800 ರೂ. ಸೇರಿಸಿ 13,600 ರೂ. ಪರಿಹಾರ ನೀಡಲಿದೆ. ನೀರಾವರಿ ಜಮೀನಿನಲ್ಲಿ ಬೆಳೆಹಾನಿಗೆ ಪ್ರತಿ ಹೆಕ್ಟೇರ್‌ಗೆ 13,500 ರೂ. ನೀಡಲಾಗುತ್ತಿದೆ. ಇದಕ್ಕೆ ಹೆಚ್ಚುವರಿಯಾಗಿ 11,500 ರೂ. ನೀಡಲು ನಿರ್ಧರಿಸಿದ್ದು, ಇದರಿಂದ ರೈತರಿಗೆ ಹೆಕ್ಟೇರ್‌ಗೆ 25,000 ರೂ. ದೊರೆಯಲಿದೆ. ತೋಟಗಾರಿಕಾ ಬೆಳೆಗಳಿಗೆ ಹೆಕ್ಟೇರ್‌ಗೆ 18,000 ರೂ. ಪರಿಹಾರ ನಿಗದಿ ಪಡಿಸಲಾಗಿದೆ. ಮೈಕ್ರೋ ಇರಿಗೇಷನ್‌ಗೆ ಶೇಕಡ 90 ಸಬ್ಸಿಡಿ ನೀಡುತ್ತಿದ್ದೇವೆ. ಕೃಷಿ ಚಟುವಟಿಕೆಗಳ ಕೌಶಲ ಬಲವರ್ಧನೆಗೆ ಸ್ಮಾರ್ಟ್ ಕೃಷಿ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಮುಂದಾಗಿದೆ. ಕೃಷಿ ಚಟುವಟಿಕೆಗಳ ಕೌಶಲ ಬಲವರ್ಧನೆಗೆ 700 ಕೋಟಿ ರೂ. ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

| ಬಿ.ಸಿ.ಪಾಟೀಲ್ ಕೃಷಿ ಸಚಿವರು



ಕೊಬ್ಬರಿಗೆ ಬೆಂಬಲ ಬೆಲೆ ಕೇಂದ್ರ ಸಂಪುಟ ಒಪ್ಪಿಗೆ

ನವದೆಹಲಿ: ಕೊಬ್ಬರಿಯ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ)ಯ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಒಪ್ಪಿಗೆ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿ ಈ ಅನುಮೋದನೆ ಕೊಟ್ಟಿದೆ. 2022ರ ಮಟ್ಟಿಗೆ ಗಾಣದ ಕೊಬ್ಬರಿಯ ಫೇರ್ ಎವರೇಜ್ ಕ್ವಾಲಿಟಿ (ಎಫ್‌ಎಕ್ಯೂ)ಗೆ ಪ್ರತಿ ಕ್ವಿಂಟಾಲ್‌ಗೆ 10,590 ರೂಪಾಯಿ ಎಂಎಸ್‌ಪಿ ನಿಗದಿ ಮಾಡಲಾಗಿದೆ. 2021ರಲ್ಲಿ ಕೊಬ್ಬರಿ ಕ್ವಿಂಟಾಲ್‌ಗೆ 10,335 ರೂ. ಎಂಎಸ್‌ಪಿ ಚಾಲ್ತಿಯಲ್ಲಿದೆ. ಇಡಿ ಕೊಬ್ಬರಿಗೆ 2022ರಲ್ಲಿ ಪ್ರತಿ ಕ್ವಿಂಟಾಲ್‌ಗೆ 11,000 ರೂಪಾಯಿ ನಿಗದಿಯಾಗಿದೆ. ಪ್ರಸಕ್ತ ವರ್ಷ ಇದು 10,600 ರೂ. ಇದೆ. ಗಾಣದ ಕೊಬ್ಬರಿಗೆ ಶೇಕಡ 51.85 ಮತ್ತು ಇಡಿ ಕೊಬ್ಬರಿಗೆ ಶೇಕಡ 57.73 ಪ್ರತಿಫಲ ಸಿಗುವುದನ್ನು ಖಾತರಿಪಡಿಸಲಾಗುತ್ತಿದೆ ಎಂದು ಸರ್ಕಾರ ಹೇಳಿದೆ.



» ಗಾಣದ ಕೊಬ್ಬರಿ ಕ್ವಿಂಟಾಲ್‌ಗೆ ₹10,590

» ಇಡಿ ಕೊಬ್ಬರಿ ಕ್ವಿಂಟಾಲ್‌ಗೆ ₹11,000

ಕ್ವಿಂಟಾಲ್ ಕೊಬ್ಬರಿ ಬೆಲೆ ₹18 ಸಾವಿರ

ತುಮಕೂರು: ತಿಪಟೂರು ಮಾರುಕಟ್ಟೆಯಲ್ಲಿ ಕೊಬ್ಬರಿಗೆ ಬುಧವಾರ ಬಂಪರ್ ಬೆಲೆ ಸಿಕ್ಕಿದೆ. ಇ-ಹರಾಜಿನಲ್ಲಿ ಕ್ವಿಂಟಾಲ್‌ಗೆ ಗರಿಷ್ಠ 18000 ರೂ. ಸಿಕ್ಕಿರುವುದು ರೈತರ ಸಂತಸಕ್ಕೆ ಕಾರಣವಾಗಿದೆ. ಕಳೆದ ಮೇ ತಿಂಗಳಲ್ಲಿ 18 ಸಾವಿರ ರೂ. ಗಡಿ ದಾಟಿತ್ತು. ಉತ್ತರ ಭಾರತದಲ್ಲಿ ಚಳಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಬೆಲೆ ಏರಿಕೆಯಾಗಿದೆ. ಬೆಲೆ ಹೆಚ್ಚಾದರೂ ಆವಕ ಬಂದಿರುವುದು 1,667 ಕ್ವಿಂಟಾಲ್ ಮಾತ್ರ. ಮಾರುಕಟ್ಟೆಗೆ ಹೆಚ್ಚು ಕೊಬ್ಬರಿ ಬಂದಾಗಲೂ ಇದೇ ಬೆಲೆ ಇರಲಿ ಎಂದು ರೈತರ ಆಶಯವಾಗಿದೆ.



ಅಭಿಷೇಕನ ಕೈ ಹಿಡಿದ ಬೇಸಾಯ



ತುಮಕೂರು ಜಿಲ್ಲೆ ಕೊರಟಗೆರೆ ತಾಲೂಕು ದಾಸಲುಕುಂಟೆಯ ಬಿಸಿಎ ಪದವೀಧರ ಜೆ.ಅಭಿಷೇಕ್, ಅತಿ ಸಣ್ಣ ರೈತ ಕುಟುಂಬದ ಯುವಕ. ಕೇವಲ 2 ಎಕರೆ ಜಮೀನು ಹೊಂದಿರುವ ಇವರು, ತೊಗರಿ, ಅಗಸೆ, ಮೆಕ್ಕೆಜೋಳ ಹಾಗೂ ತೋಟಗಾರಿಕೆ ಬೆಳೆಗಳಾದ ತೆಂಗು, ಆಡಕೆ, ಬಾಳೆ, ತರಕಾರಿ, ಸೊಪ್ಪುಗಳನ್ನು ಬೆಳೆದು ಅಧಿಕ ಆದಾಯ ಪಡೆಯಬಹುದು ಎಂಬುದನ್ನು ಸಾಧಿಸಿ ತೋರಿಸಿದ್ದಾರೆ. ಕೃಷಿಗೆ ಪೂರಕವಾಗಿ ಗೊಬ್ಬರದ ಆಗತ್ಯ ಪೂರೈಸಿಕೊಳ್ಳಲು ಆರಂಭಿಸಿರುವ ಹೈನುಗಾರಿಕೆ ಕೂಡ ಕೈಹಿಡಿದಿದ್ದು, ಇಡೀ ಕುಟುಂಬಕ್ಕೆ ಪ್ರಮುಖ ಆದಾಯದ ಮೂಲ ಎನಿಸಿದೆ. ವಿದೇಶಿ ತಳಿಯ ಹಸುಗಳನ್ನು ಕಟ್ಟಿಕೊಂಡು ಹಾಲು ಕರೆಯುವ ಅಭಿಷೇಕ್, ಸಾಕಷ್ಟು ಬೇಡಿಕೆ ಉಳಿಸಿಕೊಂಡಿರುವ ನಾಟಿ ಕೋಳಿ ಸಾಕಣೆಯನ್ನೂ ಮಾಡುತ್ತಾರೆ. ಇರುವ ಚಿಕ್ಕ ಜಮೀನಿನಲ್ಲೇ ಅರಣ್ಯ ಕೃಷಿಯನ್ನೂ ಆರಂಭಿಸಿದ್ದು ತರಹೇವಾರಿ ಗಿಡಗಳನ್ನು ನೆಟ್ಟು ಜಮೀನಿಗೆ ಬೇಲಿ ಮಾಡಿಕೊಳ್ಳುವ ಜತೆಗೆ ಇದರಿಂದಲೂ ಆದಾಯ ನಿರೀಕ್ಷಿಸುತ್ತಿದ್ದಾರೆ. ಇವರ ಸಂಪೂರ್ಣ ಜಮೀನಿಗೆ ಸಾಕಾಗುವಷ್ಟು ನೀರಾವರಿ ಸೌಲಭ್ಯವಿದ್ದು, ನೀರು ಪೋಲಾಗದಂತೆ ಹನಿ ನೀರಾವರಿಗೆ ಆದ್ಯತೆ ನೀಡಿದ್ದಾರೆ. ರೋಗ ಹಾಗೂ ಕೀಟ ನಿರ್ವಹಣೆಗೆ ಸಾವಯವ ಪದ್ಧತಿಯಲ್ಲಿಯೇ ಪರಿಹಾರ ಕಂಡುಕೊಂಡಿದ್ದಾರೆ. ಟ್ರೈಕೋಡರ್ಮಾ, ಬೇವಿನ ಹಿಂಡಿಯನ್ನು ಪೂರಕ ಗೊಬ್ಬರವಾಗಿ ಬಳಸುವ ಮೂಲಕ ಭೂಮಿಯ ಫಲವತ್ತತೆ ಕಾಪಾಡಿಕೊಂಡಿದ್ದಾರೆ. ಕೃಷಿಯನ್ನು ಲಾಭದಾಯಕವಾಗಿಸಿಕೊಳ್ಳಲು ಸಾಧ್ಯವಿರುವ ಎಲ್ಲ ಮಾರ್ಗಗಳನ್ನು ಅಳವಡಿಸಿಕೊಂಡಿರುವ ಇವರು, ಯುವ ರೈತರಿಗೆ ಮಾದರಿ ಎನಿಸಿದ್ದಾರೆ.

23-12-2021 Vv Pg 06

ಕೃಷಿಯ ಸಾಧನೆ-ಸವಾಲು

ಕೃಷಿಕ್ಷೇತ್ರ ಹಲವು ಗಂಭೀರ ಸಮಸ್ಯೆಗಳನ್ನು ಹೊಂದಿರುವುದು ಹೌದಾದರೂ, ಹೊಸ ಬೆಳವಣಿಗೆ ಮತ್ತು ತಂತ್ರಜ್ಞಾನದ ಆವಿಷ್ಕಾರಗಳಿಗೆ ತೆರೆದುಕೊಳ್ಳುತ್ತಿದೆ. ಮುಖ್ಯವಾಗಿ, ಯುವಸಮುದಾಯ ಕೃಷಿಯ ಪ್ರಾಮುಖ್ಯವನ್ನು, ಕೃಷಿಸಂಸ್ಕೃತಿ ರಕ್ಷಿಸುವ ಅನಿವಾರ್ಯತೆಯನ್ನು ಮನಗಾಣುತ್ತಿದ್ದು, ಈ ಕ್ಷೇತ್ರಕ್ಕೆ ಹೊಸ ಚೈತನ್ಯ ತುಂಬಿದೆ. ಅನೇಕ ಸಮಸ್ಯೆಗಳ ನಡುವೆಯೂ ಸಕಾರಾತ್ಮಕ ಪರಿವರ್ತನೆಯೆಡೆ ಮುಖ ಮಾಡಿರುವುದರಿಂದ ನಾಳೆಗಳ ಕುರಿತಂತೆ ಹೊಸ ಆಶಾವಾದ ಮೂಡಿದೆ. ರೈತರ ಸ್ಥಿತಿ, ಮನೋಧರ್ಮವೂ ಬದಲಾಗುತ್ತಿರುವುದು, ಕೃಷಿಯ ವಿಸ್ತರಣೆಗೆ ಪೂರಕವಾಗಿ ಪರಿಣಮಿಸಿದೆ. ಭಾರತ ಕೃಷಿಪ್ರಧಾನ ದೇಶ. ಕರ್ನಾಟಕವೂ ಈ ಕ್ಷೇತ್ರದಲ್ಲಿ ಗಮನ ಸೆಳೆಯುವಂಥ ಸಾಧನೆ ಮಾಡಿದೆ. ಸಾವಯವ ಕೃಷಿಯ ಪ್ರಮಾಣವೂ ಹೆಚ್ಚುತ್ತಿದೆ. ರೈತರ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳುತ್ತಿವೆ. ಗ್ರಾಮೀಣ ಬದುಕು ಮತ್ತು ಕೃಷಿಯಲ್ಲಿ ನಿಜವಾದ ನೆಮ್ಮದಿ ನೆಲೆಸಿದೆ ಎಂಬ ಅರಿವು ಹೆಚ್ಚುತ್ತಿದೆ. ಅಲ್ಲದೆ, ವ್ಯವಸ್ಥಿತವಾಗಿ ಮತ್ತು ಹೊಸ ತಂತ್ರಗಳ ಮೂಲಕ ಕೃಷಿಯಲ್ಲಿ ತೊಡಗಿಕೊಂಡರೆ ಅದು ಲಾಭದಾಯಕ ಎಂಬುದನ್ನು ಹೊಸಪೀಳಿಗೆಯ ಅದೆಷ್ಟೋ ರೈತರು ತೋರಿಸಿಕೊಟ್ಟಿದ್ದಾರೆ.



ಯುವಕರ ಸಹಭಾಗಿತ್ವ ಹೆಚ್ಚಳ

ರೈತಮಹಿಳೆಯರು 'ಧನಲಕ್ಷ್ಮೀ'ಯರಾಗಿ ರೂಪುಗೊಳ್ಳುತ್ತಿದ್ದಾರೆ. ಉನ್ನತ ವಿದ್ಯಾಭ್ಯಾಸ ಮಾಡಿದವರು, ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ನಿರ್ವಹಿಸಿದವರು ಹೀಗೆ ವಿವಿಧಕ್ಷೇತ್ರದವರು ಕೃಷಿಯತ್ತ ಹೊರಳಿದ್ದಾರೆ. ಮಾತ್ರವಲ್ಲ ಹೊಸ ಸಾಧ್ಯತೆಗಳನ್ನು ಅಳವಡಿಸಿ, ನವೋದ್ಯಮದ ಸ್ವರೂಪವನ್ನೂ ಕೊಟ್ಟು, ಈ ಕ್ಷೇತ್ರದ ವ್ಯಾಪ್ತಿಯನ್ನು ಹಿಗ್ಗಿಸಿ ಇತರರಿಗೆ ಮಾದರಿಯಾಗಿದ್ದಾರೆ. ಕೃಷಿಯ ಇತರ ಉತ್ಪನ್ನಗಳಿಗೆ ಇರುವ ಬೇಡಿಕೆ, ಮಾರುಕಟ್ಟೆಯ ಲಭ್ಯತೆಯನ್ನೂ ತೋರಿಸಿಕೊಟ್ಟಿದ್ದಾರೆ. ಸಾವಯವ ಮತ್ತು ಶೂನ್ಯ ಬಂಡವಾಳ ಕೃಷಿಯತ್ತ ಒಲವು ಹೆಚ್ಚುತ್ತಿರುವುದು ಆಶಾದಾಯಕ ಬೆಳವಣಿಗೆಯೇ ಸರಿ. ಜತೆಗೆ ಮರಗಳ (ಅರಣ್ಯ) ಕೃಷಿ, ಹೈನುಗಾರಿಕೆ, ಪಶುಸಂಗೋಪನೆ ಪ್ರಮಾಣ ಹೆಚ್ಚುತ್ತಿರುವುದು ಗ್ರಾಮಗಳ ಆರ್ಥಿಕತೆಗೂ ವರದಾನವಾಗಿ ಪರಿಣಮಿಸಿದೆ. ಸಣ್ಣ ಜಮೀನಿನಲ್ಲೂ ಉತ್ತಮ ಇಳುವರಿ ಪಡೆಯುತ್ತಿರುವ, ಒಣಭೂಮಿಯಲ್ಲೂ ಬಂಪರ್ ಬೆಳೆ ತೆಗೆಯುತ್ತಿರುವ ರೈತಸಾಧಕರು ಸಮಾಜಕ್ಕೆ ಸ್ಫೂರ್ತಿಯಾಗಬೇಕಿದೆ.

'ರೈತ ದಿನ'ದ ಹೊತ್ತಲ್ಲಿ ಕೃಷಿಯ ಹೊಸ ಸಾಧ್ಯತೆಗಳು ಮತ್ತಷ್ಟು ಅನಾವರಣಗೊಳ್ಳಬೇಕಿರುವುದು ಅಗತ್ಯ. ತಂತ್ರಜ್ಞಾನದ ಆಳವಡಿಕೆಯೂ ಅಷ್ಟೇ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ರೈತರಲ್ಲಿ ಆರಿವು ಮೂಡಿಸುವ, ಕೃಷಿಗಾಗಿ ಇರುವ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರುವ ಬದ್ಧತೆಯನ್ನು ಪ್ರಭುತ್ವ ಪ್ರದರ್ಶಿಸಬೇಕಿದೆ. ಎಲ್ಲ ಕ್ಷೇತ್ರಗಳಲ್ಲಿಯೂ ಸವಾಲುಗಳು ಇರುವಂತೆ ಕೃಷಿಯಲ್ಲೂ ಒಂದಿಷ್ಟು ಸಮಸ್ಯೆಗಳು ಇರುವುದು ನಿಜ. ಆದರಲ್ಲೂ ಚಿಕ್ಕ ಹಿಡುವಳಿದಾರರು ಹೆಚ್ಚಿಗೆ ಇರುವ ಮತ್ತು ನೀರಾವರಿ ಪ್ರದೇಶ ಕಡಿಮೆ ಇರುವ ಭಾರತದಂಥ ದೇಶದಲ್ಲಿ ಇಂಥ ಸನ್ನಿವೇಶ ಸಹಜ. ಹಾಗಂತ ನಿರಾಶರಾಗಬೇಕಾದ ಅಗತ್ಯವಿಲ್ಲ. ಕೃಷಿಉತ್ಪನ್ನಗಳಿಗೆ ನ್ಯಾಯಯುತ ಬೆಲೆ, ಕೃಷಿ ಪರಿಕರಗಳ ಸೂಕ್ತ ಲಭ್ಯತೆಯಂಥ ಕೆಲ ಸವಾಲುಗಳನ್ನು ಪರಿಹರಿಸಿದರೆ, ಈ ಕ್ಷೇತ್ರ ಇನ್ನಷ್ಟು ಶಕ್ತಿಶಾಲಿಯಾಗುವುದರಲ್ಲಿ ಸಂದೇಹವಿಲ್ಲ. ಕೃಷಿಗೆ ಪೂರಕ ಹಲವು ಅನ್ವೇಷಣೆಗಳು ಸಾಧ್ಯವಾಗಿರುವ ಈಗಿನ ಕಾಲಘಟ್ಟದಲ್ಲಿ ಕೃಷಿರಂಗವನ್ನು ಪ್ರಗತಿಯ ಹಾದಿಯಲ್ಲಿ ಕೊಂಡೊಯ್ಯಲು ದೂರದೃಷ್ಟಿ ಮತ್ತು ಸೂಕ್ತ ಯೋಜನೆಯ ಅಗತ್ಯ ಇದೆ. ಮತ್ತು ಕರ್ನಾಟಕದಲ್ಲಿ ಅದಕ್ಕೆ ಪೂರಕವಾದ ಅವಕಾಶಗಳೂ ಇವೆ. ರೈತರಲ್ಲಿ ಮತ್ತೆ ಕೃಷಿವಿಶ್ವಾಸ ಮೂಡಿಸುವಂತೆ, ಅವರ ಆದಾಯ ಹೆಚ್ಚಿಸುವಂತೆ ಮಾಡಬೇಕಿದೆ. ಪ್ರಭುತ್ವ ಮತ್ತು ಜನರು ಕೈಜೋಡಿಸಿದರೆ ಕೃಷಿ ಸಂಸ್ಕೃತಿಯನ್ನು ಮೆರೆಸಬಹುದು.

ಕೃಷಿ ಕ್ಷೇತ್ರದ ಜೀವ ಅಮೃತ್ ಆರ್ಗಾನಿಕ್

ಉದ್ಯಮಿ ಕೆ.ನಾಗರಾಜ್ ಸಾವಯವ ಕ್ರಾಂತಿ

■ ವಿಜಯವಾಣಿ ಸುದ್ದಿಜಾಲ ಚಿತ್ರದುರ್ಗ

'ಸಾವಯವ' ಇತ್ತೀಚಿನ ದಿನಗಳಲ್ಲಿ ಹೆಚ್ಚು ಪ್ರಚಲಿತಕ್ಕೆ ಬಂದ ಕೃಷಿ ಪದ್ಧತಿ. ಮನುಷ್ಯನ ಆಹಾರ ಪದ್ಧತಿಗೆ ಸಂಬಂಧಿಸಿದಂತೆ ತೈತ್ತರೀಯ ಉಪನಿಷತ್ತಿನಲ್ಲಿ ಒಂದು ಮಾತಿದೆ. ಆಕಾಶದಿಂದ ವಾಯು, ವಾಯುವಿನಿಂದ ನೀರು,



ನೀರಿನಿಂದ ಭೂಮಿ, ಭೂಮಿಯಿಂದ ಸಸ್ಯಗಳು, ಸಸ್ಯಗಳಿಂದ ಆಹಾರ, ಆಹಾರದಿಂದ ಮಾನವ.' ಇವಿಷ್ಟು ಶುದ್ಧವಾಗಿದ್ದರೆ ಮನುಷ್ಯನ ಆಯಸ್ಸು ನೂರು ವರ್ಷವಂತೆ.

ಮೂರ್ನಾಲ್ಕು ದಶಕಗಳಿಂದ ವಾತಾವರಣ ಕಲುಷಿತವಾಗಿದೆ. ಗಾಳಿ, ನೀರು, ಆಹಾರ ಶುದ್ಧವಾಗಿ ಉಳಿದಿಲ್ಲ. ಜೀವಿತಾವಧಿ 60-70 ವರ್ಷಕ್ಕೆ ಕುಸಿದಿದೆ. ಸಣ್ಣ ವಯಸ್ಸಿಗೆ ಬಿಪಿ, ಶುಗರ್, ಅಲ್ಸರ್, ಕ್ಯಾನ್ಸರ್‌ನಂತಹ ಕಾಯಿಲೆಗಳು ಕಾಡುತ್ತಿವೆ. ಇಷ್ಟಕ್ಕೆಲ್ಲ ಕೃಷಿಯಲ್ಲಿ ರಾಸಾಯನಿಕ ಬಳಕೆಯೇ ಕಾರಣ ಎಂದು ಕೃಷಿ ವಿವಿಗಳು, ಸಂಶೋಧನಾ ಸಂಸ್ಥೆಗಳು ಸಾರಿವೆ. ಈಗೀಗ ರೈತರು ಸಾವಯವ ಗೊಬ್ಬರ, ಸಾಂಪ್ರದಾಯಿಕ ಕೃಷಿ ಪದ್ಧತಿಯತ್ತ ಒಲವು ತೋರುತ್ತಿದ್ದಾರೆ. ದೇಶದ ಮತ್ತು ಜನರ ಸ್ವಾಸ್ಥ್ಯ ಕಾಪಾಡುವಲ್ಲಿ ಸಾವಯವ ಕೃಷಿ ಹೆಚ್ಚು ಮಹತ್ವ ಪಡೆದಿದೆ. ಇದನ್ನರಿತ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕು ಮಲ್ಲಾಡಿಹಳ್ಳಿಯ ಉದ್ಯಮಿ ಕೆ.ನಾಗರಾಜ್ ಸಾವಯವ ಕ್ರಾಂತಿ ಮಾಡಿದ್ದಾರೆ.

ಉಪಯುಕ್ತ ಗೊಬ್ಬರ

ರೈತರು ಸಾವಯವ ಕೃಷಿ ಪದ್ಧತಿ ಅನುಸರಿಸಬೇಕು. ಪೂರ್ವಜರಂತೆ ಮುಂದಿನ ಪೀಳಿಗೆ ದೀರ್ಘಾಯುಷಿಗಳಾಗಿ ಬದುಕಬೇಕು ಎಂಬ ನಿಟ್ಟಿನಲ್ಲಿ ಅಮೃತ್ ಆರ್ಗಾನಿಕ್ ಸಂಸ್ಥೆ ಹತ್ತಾರು ಬಗೆಯ ಸಾವಯವ ಗೊಬ್ಬರಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಭತ್ತ, ರಾಗಿ, ಜೋಳ, ಮೆಕ್ಕೆಜೋಳ, ಅಡಕೆ, ಬಾಳೆ, ತೆಂಗು, ತರಕಾರಿ ಎಲ್ಲದಕ್ಕೂ ಇದು ಉಪಯುಕ್ತ. ಸಂಸ್ಥೆಯ ತಜ್ಞರು ಆಸಕ್ತ ರೈತರ ಜಮೀನುಗಳಿಗೆ ತೆರಳಿ ಸಲಹೆ-ಸೂಚನೆ-ಮಾರ್ಗದರ್ಶನ ನೀಡುತ್ತಾರೆ. ಪ್ರತಿನಿತ್ಯ 200 ಕ್ಕೂ ಹೆಚ್ಚು ರೈತರು ಕಾರ್ಖಾನೆಗೆ ಭೇಟಿ ನೀಡಿ ಸಾವಯವ ಮಾಹಿತಿ ಪಡೆಯುತ್ತಿದ್ದಾರೆ.



ಆಧುನಿಕ ತಂತ್ರಜ್ಞಾನ

ಕೃಷಿಯಲ್ಲಿ ರಾಸಾಯನಿಕ ಬಳಕೆಯ ದುಷ್ಪರಿಣಾಮ ಅರಿತ ಗ್ರಾಮೀಣ ಪ್ರತಿಭೆ ಕೆ.ನಾಗರಾಜ್, ಸ್ವಂತ ಪರಿಶ್ರಮದಿಂದ 2010ರಲ್ಲಿ 'ಅಮೃತ್ ಆರ್ಗಾನಿಕ್ ಫರ್ಟಿಲೈಸರ್ಸ್' ಕಾರ್ಖಾನೆ ಆರಂಭಿಸಿದರು. ಮಲ್ಲಾಡಿಹಳ್ಳಿಯ ಹೊರವಲಯದಲ್ಲಿ 10 ಎಕರೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಹೊಂದಿದ ಕಾರ್ಖಾನೆಯಲ್ಲಿ 300 ಕ್ಕೂ ಹೆಚ್ಚು ಸ್ಥಳೀಯರಿಗೆ ಉದ್ಯೋಗ ದೊರೆತಿದೆ. ರಾಜ್ಯ, ಹೊರ ರಾಜ್ಯದ ಜಮೀನುಗಳಿಗೆ ಕಡಿಮೆ ದರದಲ್ಲಿ ಗೊಬ್ಬರ ಪೂರೈಸುತ್ತ ಸಾವಯವ ಕೃಷಿಗೆ ನಾಗರಾಜ್ ಜೀವ ತುಂಬುತ್ತಿದ್ದಾರೆ.

ವಿ ರೈತ ಮಿತ್ರ

ಶುಂಠಿಯಲ್ಲಿ ಗಡ್ಡೆ ಕೊಳೆ ರೋಗ ನಿಯಂತ್ರಣ ಮಾಡುವುದು ಹೇಗೆ?

| ಪವನ್ ಆರ್ಜಿ ಗ್ರಾಮ, ವಿರಾಜಪೇಟೆ ತಾಲೂಕು

ರೋಗಕ್ಕೆ ತುತ್ತಾದ ಗಿಡಗಳ ಎಲೆಗಳ ತುದಿ ಭಾಗವು ಹಳದಿ ಬಣ್ಣಕ್ಕೆ ತಿರುಗಿ ಕ್ರಮೇಣ ಎಲೆ ಹಳದಿಯಾಗುತ್ತದೆ. ಆನಂತರ ಗಿಡಗಳು ಬಾಡಿ ಒಣಗುತ್ತವೆ. ಗಿಡದ ಬುಡ ಭಾಗವು ತೇವಾಂಶಯುಕ್ತ ಕಂದು ಬಣ್ಣದಿಂದ ಕೂಡಿರುತ್ತದೆ. ತದ ನಂತರ ಮೃದುವಾಗಿ ನಂತರ ಕೊಳೆಯುತ್ತವೆ.



ನಿಯಂತ್ರಣ

1. ನಾಟಿಗೆ ಆರೋಗ್ಯವಂತ ರೋಗರಹಿತ ಗಡ್ಡೆಗಳನ್ನು ಬೆಳಸಬೇಕು.

2. ಚೆನ್ನಾಗಿ ನೀರು ಬಸಿದು ಹೋಗುವಂತಹ ಭೂಮಿ ಆಯ್ಕೆ ಮಾಡಬೇಕು.

3. ನಾಟಿ ಮಾಡುವ ಮುಂಚೆ ಗಡ್ಡೆಗಳನ್ನು ಪ್ರತಿ ಲೀಟರ್ ನೀರಿಗೆ 6.0 ಗ್ರಾಂ ಮೆಟಲಾಕ್ಸಲ್ ಎಂ.ಝಡ್ 72 ಡಬ್ಲ್ಯುಪಿ ಬೆರೆಸಿ ತಯಾರಿಸಿದ ದ್ರಾವಣದಲ್ಲಿ 30 ನಿಮಿಷ ನೆನೆಸಿ ನಂತರ ನಾಟಿ ಮಾಡಬೇಕು.

4. ನಾಟಿ ಮಾಡುವ ಸಮಯದಲ್ಲಿ ಪ್ರತಿ ಎಕರೆಗೆ 1.0 ಕ್ವಿಂಟಾಲ್ ಬೇವಿನ ಹಿಂಡಿ ಜತೆಗೆ 1 ಕಿ.ಗ್ರಾಂ ಟ್ರೈಕೋಡರ್ಮಾ ಜೈವಿಕ ಶಿಲೀಂಧ್ರನಾಶಕ ಬೆರೆಸಿ ಭೂಮಿಗೆ ಸೇರಿಸಬೇಕು.

5. ರೋಗ ಕಂಡು ಬಂದ ತಕ್ಷಣ ಮೆಟಲಾಕ್ಸಲ್ ಎಂ.ಝಡ್ 2.0 ಗ್ರಾಂ ಪ್ರತಿ ಲೀಟರ್ ನೀರಿಗೆ ಹಾಕಿ, ಈ ದ್ರಾವಣವನ್ನು ಎಕರೆಗೆ 2000 ಲೀಟರ್‌ನಂತೆ ಗಿಡದ ಬುಡಕ್ಕೆ ಸುರಿಯಿರಿ. ಇದೇ ರೀತಿ 15-20 ದಿನದ ಅಂತರದಲ್ಲಿ 2-3 ಸಲ ಪುನರಾವರ್ತಿಸಿ.

| ಡಾ. ಶಾಲಿನಿ ಎಂ. ತೋಟಗಾರಿಕೆ ತಜ್ಞರು

23-12-2021
Vv Pg 10

ಸುಸ್ಥಿರ ಕೃಷಿಯ ಕುರಿತು ಚಿಂತನೆ ನಡೆಯಬೇಕು

ಕೃಷಿಕರ ದಿನಾಚರಣೆ ರಾಷ್ಟ್ರೀಯ ಹಬ್ಬವಾಗಲಿ

■ ಡಾ. ಎಸ್. ರಾಜೇಂದ್ರಪ್ರಸಾದ್



ಇಂದಿಗೂ ಭಾರತ ಕೃಷಿಕರ ರಾಷ್ಟ್ರವಾಗಿದ್ದು, ಕೃಷಿ (agriculture) ಎನ್ನುವ ಆಂಗ್ಲ ಪದದಲ್ಲಿಕಲ್ಚರ್ (ಸಂಸ್ಕೃತಿ) ಅಡಕವಾಗಿದೆ. ಹಾಗಾಗಿ ಕೃಷಿಕೇವಲ ಒಂದು ಕಾಯಕವಾಗದೇ ನಮ್ಮ ರಾಷ್ಟ್ರದ ಸಂಸ್ಕೃತಿಯ ಭಾಗವೂ ಆಗಿದೆ. ನಮ್ಮ ಗ್ರಾಮೀಣ ಬದುಕು, ಕಲೆ, ಜನಪದ, ಉಡುಗೆ-ತೊಡುಗೆ, ಊಟ-ಉಪಚಾರ ಎಲ್ಲದರ ಮೂಲ ಕೃಷಿಯೇ ಆಗಿದೆ. ಕೃಷಿ ನಮ್ಮ ಬದುಕಿನ ಭಾಗವಾಗದೇ ಕೃಷಿಯೇ ನಮ್ಮ ಬದುಕಾಗಿದೆ. ಆದೆಷ್ಟೋ ಕೃಷಿಕರು ಆದಾಯಕ್ಕಾಗಿ ಅಲ್ಲದಿದ್ದರೂ, ನೆಮ್ಮದಿಯ ಬದುಕಿಗಾಗಿ ಕೃಷಿಯನ್ನು ಆರಿಸಿದ್ದಾರೆ. ತನ್ಮೂಲಕ ನಮ್ಮೆಲ್ಲರ ಹಸಿವನ್ನು ನೀಗಿಸುತ್ತಿರುವ ಈ ಕಾಯಕಯೋಗಿಯ ಸ್ಮರಣೆಗೆ ಮೀಸಲಿಟ್ಟ ದಿನ ರೈತರ ದಿನಾಚರಣೆ.

ರೈತರ ದಿನಾಚರಣೆಯನ್ನು ರಾಷ್ಟ್ರದ ಮಾಜಿ ಪ್ರಧಾನಿ ಚೌಧರಿ ಚರಣ್ ಸಿಂಗ್‌ರವರ ಹುಟ್ಟುಹಬ್ಬದ ನಿಮಿತ್ತ ಪ್ರತಿ ವರ್ಷವೂ ಡಿಸೆಂಬರ್ 23ರಂದು ಆಚರಿಸಲಾಗುತ್ತಿದ್ದು, ಈ ಸಂದರ್ಭದಲ್ಲಿ ರಾಷ್ಟ್ರದ ಕೃಷಿಕರ ಶ್ರಮ ಸಾಧನೆಯನ್ನು ಸ್ಮರಿಸಿ, ಕೃಷಿಕರ ಭವಿಷ್ಯಕ್ಕಾಗಿ, ಉನ್ನತಿಗಾಗಿ ಹೊಸ ಚಿಂತನೆ, ಕಾರ್ಯಕ್ರಮಗಳು ಹಾಗೂ ಯೋಜನೆಗಳನ್ನು ರೂಪಿಸುವ ವೇದಿಕೆಯಾಗಬೇಕಾಗಿದೆ.



ಚೌಧರಿ ಚರಣ್ ಸಿಂಗ್ ಅವರು ಉತ್ತರ ಪ್ರದೇಶದ ರೈತ ಕುಟುಂಬದಲ್ಲಿ ಜನಿಸಿ ತಮ್ಮ ಜೀವನದುದ್ದಕ್ಕೂ ರೈತರ ಏಳಿಗೆಗಾಗಿಯೇ ಹೋರಾಡಿದಂತಹ, ದುಡಿದಂತಹ ಹಾಗೂ ರೈತರ ಪ್ರತಿನಿಧಿಯಾಗಿ ರಾಷ್ಟ್ರದ ಐದನೇ ಪ್ರಧಾನಿಯಾಗಿ ಉನ್ನತ ಹುದ್ದೆಗೆ ಏರಿದ ಧೀಮಂತ ಜನ ನಾಯಕ. ಇವರ ಅವಧಿಯಲ್ಲಿ ಕೃಷಿಕರ ಕಲ್ಯಾಣಕ್ಕಾಗಿ ರೂಪಿಸಿದ ಕಾರ್ಯಕ್ರಮಗಳು, ಕೃಷಿ ಕಾಯ್ದೆಗಳು ಇಂದಿಗೂ ಮಾದರಿಯಾಗಿವೆ. ಈ ಒಂದು ದಿನ ರಾಷ್ಟ್ರದಾದ್ಯಂತ ಹಲವು ರೈತಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಕೃಷಿಕರ ಪ್ರಸ್ತುತ ಸ್ಥಿತಿಗತಿಗಳು, ಆಶಯಗಳು, ಭವಿಷ್ಯದ ಸವಾಲುಗಳು ಹಾಗೂ ರೈತ ಸಮುದಾಯದಲ್ಲಿ ಮತ್ತೆ ಚೈತನ್ಯ, ಶಕ್ತಿ ತುಂಬುವ ಹಾಗೂ ಭವಿಷ್ಯದ ಕೃಷಿ ಅಭಿವೃದ್ಧಿ ಕುರಿತಾದ ಚಿಂತನ-ಮಂಥನಗಳಿಗೂ ಈ ದಿನ ಸೂಕ್ತ ವೇದಿಕೆಯಾಗಿದೆ.

ಇಂದು ಕೃಷಿಕರ ದಿನ

ಕಳೆದ ಬಾರಿ ದಾಖಲೆಯ 309 ಮಿಲಿಯನ್ ಟನ್ ಆಹಾರೋತ್ಪಾದನೆ ಮಾಡುವ ಮೂಲಕ ರಾಷ್ಟ್ರದ ಆಹಾರ ಭದ್ರತೆಯಲ್ಲಿ ಕೃಷಿಕರ ಪಾತ್ರ ನಿರ್ಣಾಯಕವಾಗಿದ್ದರೂ ಕೃಷಿಕರ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳಲ್ಲಿ ಇನ್ನೂ ಹೆಚ್ಚಿನ ಸುಧಾರಣೆಗಳನ್ನು ಕಾಣಬೇಕಾಗಿದೆ. ಈ ನಿಟ್ಟಿನಲ್ಲಿ ಕೃಷಿಕರು ಕೇವಲ ಉತ್ತಿ, ಬಿತ್ತಿ, ಕೊಯ್ಲುಮಾಡಿದರೆ ತಮ್ಮ ಕೆಲಸ ಮುಗಿಯಿತು ಎನ್ನುವ ಪರಿಕಲ್ಪನೆಯಿಂದ ಹೊರಬಂದು, ಕೊಯ್ಲೋತ್ತರ ಕೃಷಿಯಲ್ಲಿ (ಸಂಸ್ಕರಣೆ, ಮೌಲ್ಯವರ್ಧನೆ, ಗ್ರೇಡಿಂಗ್, ಬ್ರಾಂಡಿಗ್ ಇತ್ಯಾದಿ) ತಮ್ಮನ್ನು ತೊಡಗಿಸಿಕೊಂಡಿದ್ದಯಾದಲ್ಲಿ ಹೆಚ್ಚಿನ ಆದಾಯವನ್ನು ಪಡೆಯಬಹುದಾಗಿದೆ. ಪ್ರಸ್ತುತ ಭಾರತೀಯ ಆಹಾರ ಹಾಗೂ ದಿನಸಿ ಮಾರುಕಟ್ಟೆ ಜಾಗತಿಕ ಮಟ್ಟದಲ್ಲಿ ಆರನೇ ಸ್ಥಾನದಲ್ಲಿದ್ದು, ಆಹಾರ ಸಂಸ್ಕರಣೆ ಒಟ್ಟು ಆಹಾರ ಮಾರುಕಟ್ಟೆಗೆ ಶೇ.32ರಷ್ಟು ಕೊಡುಗೆಯನ್ನು ನೀಡುತ್ತಿದ್ದು, ಶೇ.13ರಷ್ಟು ಸಂಸ್ಕರಿಸಿದ ಉತ್ಪನ್ನಗಳು ರಫ್ತಾಗುತ್ತಿವೆ. ಒಟ್ಟಾರೆ, ಭಾರತೀಯ ಆಹಾರ ಸಂಸ್ಕರಣಾ ಮಾರುಕಟ್ಟೆ 2018ರ ಅಂಕಿ ಅಂಶಗಳ ಪ್ರಕಾರ 24,665 ಬಿಲಿಯನ್ ಮಹಿವಾಟು ಹೊಂದಿದ್ದು, 2024ರ ಹೊತ್ತಿಗೆ 50 ಸಾವಿರ ಬಿಲಿಯನ್ ದಾಟಲಿದ್ದು, ಈ ವಿಪುಲ ಅವಕಾಶಗಳನ್ನು ಕೃಷಿಕರು ಬಳಸಿಕೊಳ್ಳಬೇಕಾಗಿದೆ.

ಇದರ ಜೊತೆ ಕೃಷಿ ಲಾಭದಾಯಕವಾಗಬೇಕಾದಲ್ಲಿ ಉತ್ಪಾದನಾ ವೆಚ್ಚವನ್ನು ತಗ್ಗಿಸಬೇಕಾಗಿದೆ. ಸಂಪನ್ಮೂಲಗಳ ಸದ್ಬಳಕೆ, ಆಗತ್ಯತೆಗೆ ಅನುಗುಣವಾಗಿ ಕೃಷಿ ಪರಿಕರಗಳ ಬಳಕೆ, ಕೃಷಿ ಕಾರ್ಮಿಕರ ಸಮಸ್ಯೆಯನ್ನು ನೀಗಿಸಲು ಯಂತ್ರೋಪಕರಣಗಳ ಬಳಕೆ, ಸಾಗರದಾಚೆಯ ಮಾರುಕಟ್ಟೆಗಳ ಹುಡುಕಾಟ ಸಹ ಅನಿವಾರ್ಯವಾಗುತ್ತಿದೆ.

ಇದರ ಜೊತೆ ಇತರ ಕ್ಷೇತ್ರಗಳಂತೆ ಕೃಷಿ ಕ್ಷೇತ್ರದಲ್ಲೂ ಮಾಹಿತಿ ತಂತ್ರಜ್ಞಾನ, ಆಧುನಿಕ ತಂತ್ರಜ್ಞಾನಗಳನ್ನು ಹೆಚ್ಚು-ಹೆಚ್ಚು ಬಳಕೆ ಮಾಡುವ ಅನಿವಾರ್ಯತೆಯಿದ್ದು ಕೃಷಿಕರು ಮೊಬೈಲ್ ಆ್ಯಪ್‌ಗಳನ್ನು ಬಳಸುವ ಮೂಲಕ ಆ ಕ್ಷಣದ ಮಾಹಿತಿ (ತಂತ್ರಜ್ಞಾನ, ಮಾರುಕಟ್ಟೆ ಹವಾಮಾನ) ಪಡೆದು ಕೃಷಿಯಲ್ಲಿನ ನಷ್ಟದ ಪ್ರಮಾಣ ತಗ್ಗಿಸಿ, ನಿಖರ ಕೃಷಿ, ಆಟೋಮೇಶನ್, ಡಿಜಿಟಲ್ ತಂತ್ರಜ್ಞಾನಗಳನ್ನು ಬಳಸಿ ಜಾಗತಿಕ ಸ್ಪರ್ಧೆಯ ಮೂಲಕ ಸುಸ್ಥಿರತೆಯನ್ನು ಕಂಡುಕೊಳ್ಳಬೇಕಾಗಿದೆ.

ಕೃಷಿಕರ ಸೇವೆಯಲ್ಲಿ ಕಳೆದ 56 ವರ್ಷಗಳಿಂದ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಇದುವರೆಗೂ 300ಕ್ಕೂ ಹೆಚ್ಚು ತಳಿ, ಹಲವಾರು ತಂತ್ರಜ್ಞಾನಗಳನ್ನು ಬಿಡುಗಡೆ ಮಾಡುವ ಮೂಲಕ ರಾಜ್ಯದ ಕೃಷಿಕರ ಆರ್ಥಿಕ, ಸಾಮಾಜಿಕ ಏಳಿಗೆಗೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಾ ಬಂದಿದೆ. ಕೃಷಿ ಶಿಕ್ಷಣದಲ್ಲಿಯೂ ರಾಷ್ಟ್ರದಲ್ಲಿಯೇ ಮುಂಚೂಣಿಯಲ್ಲಿರುವ ವಿಶ್ವವಿದ್ಯಾನಿಲಯದ ಕೃಷಿ ಶಿಕ್ಷಣವನ್ನು ಆರಸಿ ಬರುವ ಪ್ರಶಸ್ತ ತಾಣವಾಗಿದೆ. ವಿನೂತನ ವಿಸ್ತರಣಾ ವಿಧಾನಗಳ ಮೂಲಕ ಕೃಷಿಕರಿಗೆ ತಂತ್ರಜ್ಞಾನವನ್ನು ಶೀಘ್ರವಾಗಿ ವರ್ಗಾಯಿಸುತ್ತಿದೆ. ಒಟ್ಟಾರೆ ವಿಶ್ವವಿದ್ಯಾನಿಲಯದ ಸಾಧನೆಗಳನ್ನು ಪರಾಗಸಿಸಿ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಈ ಬಾರಿ ರಾಷ್ಟ್ರಮಟ್ಟದಲ್ಲಿ ಮೂರನೆಯ ಹಾಗೂ ದಕ್ಷಿಣ ಭಾರತದ ಪ್ರಥಮ ಕೃಷಿ ವಿಶ್ವವಿದ್ಯಾನಿಲಯೆಂದು ಘೋಷಿಸಿದ್ದು, ಇದು ರಾಜ್ಯದ ಕೃಷಿಕರಿಗೆ ಹೆಮ್ಮೆಯ ವಿಷಯವಾಗಿದೆ.

ಈ ಬಾರಿ ವಿಶ್ವವಿದ್ಯಾಲಯವು ರೈತರ ದಿನಾಚರಣೆಯನ್ನು ಹೆಚ್ಚು ಅರ್ಥಪೂರ್ಣವಾಗಿ ಆಚರಿಸಲು ಕ್ಷೇತ್ರಮಟ್ಟದಲ್ಲಿ ತರಬೇತಿ, ಜಾಗೃತಿ ಕಾರ್ಯಕ್ರಮ, ಕೃಷಿ ಅಭಿಯಾನಗಳನ್ನು ಆಯೋಜಿಸಲಾಗುತ್ತಿದೆ. ಒಟ್ಟಾರೆ ಕೃಷಿಕರ ಪ್ರಗತಿಯ ಮೇಲೆ ರಾಷ್ಟ್ರದ ಭವಿಷ್ಯ ಅವಲಂಬಿತವಾಗಿದ್ದು, ಈ ಕುರಿತಾದ ಹೊಸ ಸಾಧ್ಯತೆಗಳನ್ನು ಈ ದಿನಾಚರಣೆ ತೆರೆದಿಡುವಂತಾಗಲಿ ಎಂದು ಆಶಿಸುತ್ತೇನೆ.

(ಲೇಖಕರು ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು)

23-12-2021 Vk Pg 07



ಹಿಂಗಾರು ಹಂಗಾಮಿನ ಶೇ.86 ಬಿತ್ತನೆ ಪೂರ್ಣ

ವಾಡಿಕೆಗಿಂತ ಶೇ.90 ಅಧಿಕ ಮಳೆ

ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಅಧಿಕ ಬಿತ್ತನೆ

■ ಸತೀಶ್ ಕಂದಗಲ್‌ಪುರ ಬೆಂಗಳೂರು

ರಾಜ್ಯದಲ್ಲಿ ಈ ಬಾರಿ ಹಿಂಗಾರು ಮಳೆ ಉತ್ತಮವಾಗಿದ್ದು, ಕೃಷಿ ಇಲಾಖೆ ನಿಗದಿ ಮಾಡಿರುವ 28 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಈಗಾಗಲೆ ಶೇ.86 ಗುರಿ ಸಾಧನೆಯಾಗಿದೆ. ಕೃಷಿ ಇಲಾಖೆಯು ಪ್ರಸ್ತುತ 2021-22ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ಕೃಷಿ ಬೆಳೆಗಳ ಪ್ರಸ್ತಾವಿತ ಬಿತ್ತನೆ ಗುರಿಯನ್ನು 28 ಲಕ್ಷ ಹೆಕ್ಟೇರ್ ಎಂದು ನಿಗದಿಗೊಳಿಸಿದೆ. ಈ ಪೈಕಿ ಡಿ.20ರ ವರೆಗೆ 24.19 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ (ಶೇ.86) ಬಿತ್ತನೆಯಾಗಿದೆ. ಬೆಳೆವಾರು ಹಾಗೂ ಜಿಲ್ಲಾವಾರು ಬಿತ್ತನೆ ಪ್ರಗತಿ ವಿವರಗಳನ್ನು ಪರಿಶೀಲಿಸಿದಲ್ಲಿ ಚಾಮರಾಜನಗರ, ಮಂಡ್ಯ, ಧಾರವಾಡ, ಗದಗ, ಹಾವೇರಿ, ವಿಜಯಪುರ, ರಾಯಚೂರು, ಕೊಪ್ಪಳ ಮತ್ತು ಬೀದರ್ ಜಿಲ್ಲೆಗಳಲ್ಲಿ ಬಿತ್ತನೆ ಪ್ರಮಾಣ ಅಧಿಕವಾಗಿದೆ. ಕಪ್ಪು ಮಣ್ಣಿನಲ್ಲಿ ತೇವಾಂಶ ಪ್ರಮಾಣ ಹೆಚ್ಚಾಗಿದ್ದು, ಬಿಳಿಜೋಳ, ಮೆಕ್ಕೆಜೋಳ, ಹತ್ತಿ, ಮೆಣಸಿನಕಾಯಿ, ತೊಗರಿ, ಹುರಿಗಡಲೆ ಸೇರಿ ಹಲವು ದ್ವಿದಳ ಧಾನ್ಯ ಬೆಳೆಗಳನ್ನು ಅಧಿಕವಾಗಿ ಬಿತ್ತನೆ ಮಾಡಲಾಗಿದೆ.

ವಾಡಿಕೆಗಿಂದ ಶೇ.90 ಮಳೆ ಅಧಿಕ: ರಾಜ್ಯದ ಎಲ್ಲ ಪ್ರದೇಶಗಳನ್ನು ಒಳಗೊಂಡಂತೆ ವಾಯವ್ಯ ಮಾರುತ ಮಳೆಯ ಅವಧಿಯಲ್ಲಿ (ಹಿಂಗಾರು ಮಳೆ) ಅ.1 ರಿಂದ ಡಿ.18ರ ವರೆಗೆ ವಾಡಿಕೆಯಂತೆ 180 ಮಿ.ಮೀ.ಮಳೆಯಾಗಬೇಕು. ಆದರೆ, ಇದಕ್ಕೆ ಪ್ರತಿಯಾಗಿ 342 ಮಿ.ಮೀ. ವಾಸ್ತವಿಕ ಮಳೆಯಾಗಿದೆ. ಇದನ್ನು ವಾಡಿಕೆಗೆ ಹೋಲಿಕೆ ಮಾಡಿದಲ್ಲಿ ಶೇ.90 ಮಳೆ ಅಧಿಕವಾಗಿದೆ. ಇನ್ನು ಡಿ.1 ರಿಂದ 18ರ ವರೆಗೆ ಸರಾಸರಿ 7.5 ಮಿ.ಮೀ. ಮಳೆಯಾಗಬೇಕಿದ್ದು, ವಾಸ್ತವಿಕವಾಗಿ 19.4 ಮಿ.ಮೀ. ಮಳೆಯಾಗಿದೆ. ಕೇವಲ 18 ದಿನಗಳ ಮಳೆಯಲ್ಲಿ ವಾಡಿಕೆಗಿಂತ ಶೇ.159 ಅಧಿಕವಾಗಿದೆ.

ಕೃಷಿ ಪರಿಕರಗಳ ಸರಬರಾಜು

ಹಿಂಗಾರು ಹಂಗಾಮಿನಲ್ಲಿ ಪ್ರಮಾಣಿತ ಬಿತ್ತನೆ ಬೀಜದ ಅಂದಾಜು ಬೇಡಿಕೆ 3.53 ಲಕ್ಷ ಕ್ವಿಂಟಾಲ್ ಆಗಿದೆ. ಈವರೆಗೆ ರೈತ ಸಂಪರ್ಕ ಕೇಂದ್ರಗಳ ಮೂಲಕ 2.53 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜ ವಿತರಣೆ ಮಾಡಲಾಗಿದೆ. ಜತೆಗೆ, 27,004.69 ಕ್ವಿಂಟಾಲ್ ಬಿತ್ತನೆ ಬೀಜ ದಾಸ್ತಾನಿದೆ. ಇನ್ನು 2020-21ರ ಹಿಂಗಾರು ಅಥವಾ ಬೇಸಿಗೆ ಹಂಗಾಮಿನಲ್ಲಿ 16.94 ಲಕ್ಷ ಮೆಟ್ರಿಕ್ ಟನ್ ವಿವಿಧ ರಾಸಾಯನಿಕ ರಸಗೊಬ್ಬರಗಳ ಬೇಡಿಕೆ ಅಂದಾಜಿಸಲಾಗಿದೆ. ಡಿ.18ರ ವರೆಗೆ 5.82 ಲಕ್ಷ ಮೆಟ್ರಿಕ್ ಟನ್ ವಿವಿಧ ರಸಗೊಬ್ಬರ ಸರಬರಾಜು ಮಾಡಲಾಗಿದೆ. ಉಳಿದಂತೆ 6.06 ಲಕ್ಷ ಟನ್ ದಾಸ್ತಾನು ಇದೆ ಎಂದು ಕೃಷಿ ಇಲಾಖೆ ಮಾಹಿತಿ ನೀಡಿದೆ.

23-12-2021 Vv Pg 10

23-12-2021 Vk Pg 10

ರೈತರ ಹಿತಾಸಕ್ತಿಗೆ ಎಸ್‌ಬಿಐ ಆದ್ಯತೆ

ಬೆಂಗಳೂರು: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ರೈತರಿಗೆ ಹಲವು ಯೋಜನೆಗಳನ್ನು ಹಮ್ಮಿ ಕೊಂಡಿದೆ. ಯೋನೊ ಎಸ್‌ಬಿಐ ಮೊಬೈಲ್ ಆ್ಯಪ್ ಮೂಲಕ ಹವಾ ಮಾನ ಮಾಹಿತಿ ಹಾಗೂ ಬೆಳೆಗಳ ಆಯಾ ದಿನದ ದರದ ಮಾಹಿತಿಯನ್ನು ಒದಗಿಸುತ್ತದೆ. ಕೃಷಿ ಯಂತ್ರಗಳನ್ನೂ ಪಡೆಯಬಹುದು. ಶೇ.7ರ ಬಡ್ಡಿ ದರದಲ್ಲಿ ಕಿಸಾನ್ ಕ್ರೆಡಿಟ್ ಕಾರ್ಡ್ ಸೌಲಭ್ಯ ಕಲ್ಪಿಸಿದೆ. ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಚಿನ್ನದ ಅಡಮಾನ ರುವ ಕೃಷಿ ಸಾಲವನ್ನು ವಿತರಿಸಲಾಗುತ್ತಿದೆ. ಯೊನೊ ಆ್ಯಪ್ ಮೂಲಕವೂ ಇದನ್ನು



ಪಡೆಯಬಹುದು. ಸ್ವಸಹಾಯ ಗುಂಪುಗಳಿಗೆ ಸಾಲ ಸೌಲಭ್ಯ ನೀಡಲಾಗುತ್ತಿದೆ. 2 ಕೋಟಿ ರೂ. ತನಕ ಆಸ್ತಿ ಆಧಾರದ ಕೃಷಿ ಸಾಲ ಸೌಲಭ್ಯ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ಎಸ್‌ಬಿಐ ಬ್ಯಾಂಕ್ ಶಾಖೆಯನ್ನು ಸಂಪರ್ಕಿಸಬಹುದು ಎಂದು ಬ್ಯಾಂಕ್ ತಿಳಿಸಿದೆ.

ಕೃಷಿ ಭೂಮಿ ದಾಖಲೆ ತಿದ್ದಿದರೆ ಕ್ರಿಮಿನಲ್ ಮೊಕದ್ದಮೆ

ವಿಧಾನ ಪರಿಷತ್ತು : ಕೃಷಿ ಜಮೀನನ್ನು ದಾಖಲೆಗಳಲ್ಲಿ ಸ್ವಯಂಪ್ರೇರಿತವಾಗಿ ಕೃಷಿ0ೇತರ ಜಮೀನು ಎಂದು ತಿದ್ದುಪಡಿ ಮಾಡುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದಾಗಿ ಕಂದಾಯ ಸಚಿವ ಆರ್.ಅಶೋಕ್ ಎಚ್ಚರಿಕೆ ನೀಡಿದರು.

ಬುಧವಾರ ಪರಿಷತ್ತಿನ ಪ್ರಶ್ನೋತ್ತರ ವೇಳೆ0ಲ್ಲಿ ಸದಸ್ಯ ಎಂ.ನಾರಾಯಣಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 95ರಡಿ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಪ್ರಮಾಣ ಪತ್ರ ಆಧಾರಿತ ಭೂ ಪರಿವರ್ತನೆಯ ತಂತ್ರಾಂಶ ಜಾರಿಗೊಳಿಸಿರುವುದರಿಂದ ನಿಗದಿತ ಅವಧಿಯಲ್ಲಿ ಅರ್ಜಿದಾರರು ಕೋರಿರುವ ಉದ್ದೇಶಕ್ಕಾಗಿ ಭೂ ಪರಿವರ್ತನೆ0ಾದ ನಂತರ ಭೂಮಿ ತಂತ್ರಾಂಶದಲ್ಲಿ ಪಹಣಿ ಕಾಲಂ 9 ಮತ್ತು 10 ರಲ್ಲಿ ಭೂಪರಿವರ್ತನೆ ಎಂಬುದಾಗಿ ಫ್ಲಾಗ್ ಆಗುತ್ತದೆ. ತದನಂತರ ಸರ್ವೇ ನಂಬರ್, ಸರ್ವೇ ದಾಖಲೆಗಳಲ್ಲಿ ದರುಸ್ತಿಯಾದ ನಂತರ ಎನ್.ಎ.ಖಿರಾಬು ಎಂಬುವುದಾಗಿ ನಮೂದು ಮಾಡಲಾಗಿದೆ ಎಂದು ವಿವರಿಸಿದರು.

ಅಲ್ಲದೆ, ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆ ಮಾಡಲು ಆನ್ ಲೈನ್‌ನಲ್ಲಿ ತಂತ್ರಾಂಶವನ್ನು ಜಾರಿಗೆ ತಂದಿರುವುದರಿಂದ ಭೌತಿಕವಾಗಿ ಭೂ ಪರಿವರ್ತನೆ ಆದೇಶ ನೀಡಿಲ್ಲ. ಹೀಗಾಗಿ, ಕೃಷಿ ಜಮೀನನ್ನು ದಾಖಲೆಗಳಲ್ಲಿ ಸ್ವಯಂ ಪ್ರೇರಿತವಾಗಿ ಕೃಷಿಯೇತರ ಜಮೀನು ಎಂದು ತಿದ್ದುಪಡಿ ಮಾಡುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲಾಗುವುದು. ಜತೆಗೆ ತಪ್ಪಿತಸ್ಥರಿಗೆ ಒಂದ ವರ್ಷ ಜೈಲು, ಐದು ಸಾವಿರ ರೂ. ಜುಲ್ಮಾನೆ ಬೀಳಲಿದೆ ಎಂದು ಸದನಕ್ಕೆ ಸಚಿವರು ತಿಳಿಸಿದರು.

ಇದಕ್ಕೂ ಮುನ್ನ ನಾರಾಯಣಸ್ವಾಮಿ ಪ್ರಶ್ನೆ ಮಾಡಿ, ಗ್ರಾಮ, ಪಟ್ಟಣ ಪಂಚಾಯಿತಿ, ಬಫರ್ ಪ್ರದೇಶ ಹೆಸರಿನಲ್ಲಿ ರೈತರ ಅಕ್ರಮ ಸಕ್ರಮ ಅರ್ಜಿಗಳನ್ನು ವಿನಾಕಾರಣ ತಿರಸ್ಕಾರ ಮಾಡುತ್ತಿರುವವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

23-12-2021
Sk Pg 08

ಕೃಷಿ ಕಾಲೇಜುಗಳಿಗೆ ಅಗತ್ಯ ಸೌಲಭ್ಯ

ಪ್ರಶ್ನೆ : ಬಳ್ಳಾರಿ ತಾಲೂಕು ಹಗರಿ ಗ್ರಾಮದಲ್ಲಿ ಹೊಸದಾಗಿ ಕೃಷಿ ಕಾಲೇಜು ಆರಂಭಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ?

■ ಎಂ.ಎಸ್. ಸೋಮಲಿಂಗಪ್ಪ, ಶಾಸಕರು.



ಉತ್ತರ : ಈಗಿರುವ ಚಾಮರಾಜನಗರ ಮತ್ತು ಗಂಗಾವತಿಯಲ್ಲಿ ಇರುವ ಕೃಷಿ ಕಾಲೇಜುಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಿದ ನಂತರೇ ಹೊಸ ಕಾಲೇಜು ಆರಂಭಿಸುವ ಬಗ್ಗೆ ಚಿಂತನೆ ನಡೆಸಲಾಗುವುದು.

■ ಬಿ.ಸಿ. ಪಾಟೀಲ್ | ಕೃಷಿ ಸಚಿವರು.

23-12-2021
Sk Pg 05

ರೈತರ ನಿಸ್ವಾರ್ಥ ಸೇವೆಗೊಂದು ಸಲಾಮ್

ಭಾರತದ 5ನೇ ಪ್ರಧಾನಿ ಚೌಧರಿ ಚರಣ್ ಸಿಂಗ್ ಸ್ಮರಣಾರ್ಥ ಡಿ.23 ರಂದು ''ರಾಷ್ಟ್ರೀಯ ರೈತ ದಿನ'' ಆಚರಣೆ

ಬಿಸಿಲಿನ ಬೇಗೆಯನ್ನು ಸಹಿಸಿ, ಬೆವರು-ಕಂಬನಿ ಸುರಿಸಿ, ಕೆಸರಿನಲ್ಲಿ ಶ್ರಮಿಸಿ ಅನ್ನವೆಂಬ ಅಮೃತ ನೀಡುತ್ತಿರುವ ಅನ್ನದಾತರ ಋಣವನ್ನು ನಾವೆಂದೂ ತೀರಿಸಲಾಗದು. ಲಾಭವಿರಲಿ, ನಷ್ಟವಿರಲಿ ಕೃಷಿಯನ್ನೇ ತಮ್ಮ ಬದುಕಿನ ಜೀವಾಳವನ್ನಾಗಿಸಿಕೊಂಡು ನಮ್ಮೆಲ್ಲರ ಹಸಿವು ನೀಗಿಸುತ್ತಿರುವ ರೈತರ ನಿಸ್ವಾರ್ಥ ಸೇವೆಗೆ ನಮನ ಸಲ್ಲಿಸಲು ಮೀಸಲಿರುವ ದಿನವೇ ರಾಷ್ಟ್ರೀಯ ರೈತ ದಿನಾಚರಣೆ (ಕಿಸಾನ್ ದಿವಸ್).



ದೇಶದ ಜಿಡಿಪಿಯಲ್ಲಿ ಶೇ.20 ರಷ್ಟು (Economic Survey 2020-2021) ಕೊಡುಗೆ ನೀಡುವ ಕೃಷಿ ಕ್ಷೇತ್ರವು ಭಾರತೀಯ ಆರ್ಥಿಕತೆಯ ಪ್ರಮುಖ ಕ್ಷೇತ್ರವಾಗಿದೆ. ಇದು ಶೇ.58 ರಷ್ಟು ಮಂದಿಯ ಜೀವನೋಪಾಯದ ಮೂಲ. ದೇಶದ ಜನರಿಗೆ ಅನ್ನ ನೀಡುವುದರ ಜತೆಗೆ ಆರ್ಥಿಕ ಪ್ರಗತಿಗೂ ಬೆನ್ನೆಲುಬಾಗಿರುವ ರೈತರ ಪಾಡು ಇಂದಿಗೂ ಆರಕ್ಕೇರದೇ ಮೂರಕ್ಕಿಳಿಯದಂತೆಯೇ ಇದೆ. ಯಾವುದೇ ಸರ್ಕಾರ ಬಂದು ಸಬ್ಸಿಡಿ, ಪಿಮೆ, ಸಾಲ ಮನ್ಸಾ, ಕೃಷಿ ಭಾಗ್ಯದಂಥ ಸಾಲು ಸಾಲು ಯೋಜನೆಗಳನ್ನು ತಂದರೂ ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗದೆ, ಸಂಗ್ರಹವ್ಯವಸ್ಥೆಯ ಕೊರತೆ ಇತ್ಯಾದಿ ಕಾರಣಗಳಿಂದಾಗಿ ರೈತರ ಬದುಕು ಸುಧಾರಣೆ ಕಾಣುತ್ತಲೇ ಇಲ್ಲ. ಹೀಗೇ ಸಮಾಜಕ್ಕೆ ಶಕ್ತಿಯಾಗಿರುವ ರೈತರ ಬದುಕು-ಬವಣೆ, ಕೊಡುಗೆಯನ್ನು ಯುವಪೀಳಿಗೆಗೆ ಪರಿಚಯಿಸಿ ಕೃಷಿಯತ್ತ ಒಲವು ಮೂಡಿಸುವುದರ ಜತೆಗೆ ರೈತರಿಗೆ ಗೌರವ ಸಲ್ಲಿಸುವ ಕಾರಣಕ್ಕೆ ಹಾಗೂ ಭಾರತದ ಐದನೇ ಪ್ರಧಾನಿ ಚೌಧರಿ ಚರಣ್ ಸಿಂಗ್ ಸ್ಮರಣಾರ್ಥ ವರ್ಷಂಪ್ರತಿ ಡಿಸೆಂಬರ್ 23 ರಂದು ರಾಷ್ಟ್ರೀಯ ರೈತರ ದಿನಾಚರಣೆಯನ್ನು ಆಚರಿಸಲಾಗುತ್ತದೆ.

ತಾವೂ ಒಬ್ಬ ರೈತ ಕುಟುಂಬದ ಮಗನಾಗಿ ರೈತರ ಕಷ್ಟಗಳನ್ನರಿತು ಉಳಿದ ರೈತರಿಗೆ ನೆರವಾಗಲು ಪಣ ತೊಟ್ಟವರೇ ಚೌಧರಿ ಚರಣ್ ಸಿಂಗ್. ಜನತಾ ಪಕ್ಷದ ಪ್ರಧಾನ ಮಂತ್ರಿ ಮೊರಾರ್ಜಿ ದೇಸಾಯಿಯವರ ನಿಧನದ ನಂತರ ಸಿಂಗ್ ಅವರು ಜುಲೈ 28, 1979ರಿಂದ 14 ಜನವರಿ 1980ರವರೆಗೆ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿದರು. ಅಲ್ಪಾವಧಿಯಲ್ಲಿ ಕೃಷಿ ಕ್ಷೇತ್ರದ ಅಭಿವೃದ್ಧಿಗಾಗಿ ರೈತರ ಕಲ್ಯಾಣಕ್ಕಾಗಿ ಸಾಕಷ್ಟು ಸುಧಾರಣೆಗಳು ಮತ್ತು ನಿಯಮಾವಳಿಗಳನ್ನು ಜಾರಿಗೊಳಿಸಿದರು. ಅವರು ಜಾರಿಗೊಳಿಸಿದ ಜಮೀನ್ದಾರಿ ನಿರ್ಮೂಲನ ಕಾಯ್ದೆಯಿಂದ ರೈತರ ಬದುಕೇ ಹೊಸ ದಿಕ್ಕಿನತ್ತ ಸಾಗಿತು. ಇಂಥ ಅದೆಷ್ಟೋ ಯೋಜನೆಗಳನ್ನು ಜಾರಿಗೊಳಿಸಿ ರೈತರ ನೆಚ್ಚಿನ ನಾಯಕ ಎನಿಸಿಕೊಂಡರು. ರಾಜಕಾರಣಿಗಳಲ್ಲದೆ, ಮಾಜಿ ಪ್ರಧಾನ ಮಂತ್ರಿಯೂ ಉತ್ತಮ ಬರಹಗಾರರಾಗಿದ್ದರು.

ಚೌಧರಿ ಅವರು 1979ರ ಬಜೆಟ್‌ನ್ನು ಸಂಪೂರ್ಣವಾಗಿ ರೈತರ ಬೇಡಿಕೆಗಳ ಈಡೇರಿಕೆಗೆ ಮೀಸಲಿಟ್ಟಿದ್ದರು. ರೈತರ ಬದುಕನ್ನು ಹಸನಗೊಳಿಸುವ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿದರು. ವಿತರಕರ ಅವ್ಯವಹಾರವನ್ನು ತಡೆಗಟ್ಟಲು ಕೃಷಿ ಉತ್ಪನ್ನ ಮಾರುಕಟ್ಟೆ ಮಸೂದೆಯನ್ನು ಅಸೆಂಬ್ಲಿಯಲ್ಲಿ ಮಂಡಿಸಿದರು. ಜವಾಹರಲಾಲ್ ನೆಹರೂ ಅವರ ಸಾಮೂಹಿಕ ಭೂ-ಬಳಕೆಯ ನೀತಿಗಳ ವಿರುದ್ಧ ಧ್ವನಿ ಎತ್ತಿದವರು ಚೌಧರಿ. ರೈತರ ಪರ ಹೋರಾಡಿದ, ಬರವಣಿಗೆ ಮೂಲಕ ಅನ್ನದಾತರ ಸಮಸ್ಯೆಗಳನ್ನು ಅನಾವರಣಗೊಳಿಸಿದ ಚರಣ್ ಸಿಂಗ್ ಚೌಧರಿ ಅವರು 29 ಮೇ 1987 ರಂದು ನಿಧನರಾದರು. ಈ ದಿನವನ್ನು ಉತ್ತರಪ್ರದೇಶದಲ್ಲಿ ಸಾರ್ವಜನಿಕ ರಜಾದಿನವೆಂದು ಘೋಷಿಸಲಾಗಿದೆ.

ಚೌಧರಿ ಅವರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಭಾರತ ಸರ್ಕಾರವು 2001 ರಲ್ಲಿ ಸಿಂಗ್ ಅವರ ಜನ್ಮದಿನವನ್ನು ಕಿಸಾನ್ ದಿವಸ್ ಅಥವಾ ರಾಷ್ಟ್ರೀಯ ರೈತರ ದಿನಾಚರಣೆಯನ್ನಾಗಿ ಆಚರಿಸಲು ನಿರ್ಧರಿಸಿತು. ಈ ದಿನದಂದು ದೇಶಾದ್ಯಂತ ವಿಭಾಗೀಯ, ಜಿಲ್ಲಾ ಮತ್ತು ಬ್ಲಾಕ್ ಮಟ್ಟದಲ್ಲಿ ರೈತರಿಗಾಗಿ ವಿಚಾರ ಸಂಕಿರಣಗಳು ಮತ್ತು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ರೈತರ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡಲು ವೇದಿಕೆಯನ್ನು ಕಲ್ಪಿಸಲಾಗುತ್ತದೆ. ನವದೆಹಲಿಯ ಕಿಸಾನ್ ಘಾಟ್‌ನಲ್ಲಿ ಚೌಧರಿ ಅವರ ಸಮಾಧಿಗೆ ನಾಯಕರು ಭೇಟಿ ನೀಡಿ ಗೌರವ ಸಮರ್ಪಿಸುತ್ತಾರೆ. ಕೃಷಿ ವಿಸ್ತರಣಾ ಅಧಿಕಾರಿಗಳು ಮತ್ತು ಕೃಷಿ ವಿಜ್ಞಾನಿಗಳು ಹಳ್ಳಿಗಳಲ್ಲಿನ ರೈತರೊಂದಿಗೆ ಸಂವಹನ ನಡೆಸುತ್ತಾರೆ ಮತ್ತು ಅವರಿಗೆ ಇತ್ತೀಚಿನ ಕೃಷಿ ಯೋಜನೆಗಳ ಬಗ್ಗೆ ಮಾಹಿತಿ ನೀಡುತ್ತಾರೆ. ಸರ್ಕಾರವು ವಿವಿಧ ಸ್ಪರ್ಧೆಗಳನ್ನು ಆಯೋಜಿಸಿ, ರೈತರ ಭಾಗವಹಿಸುವಿಕೆಯನ್ನು ಬೆಂಬಲಿಸಿ ವಿಜೇತರಿಗೆ ಆಕರ್ಷಕ ಬಹುಮಾನಗಳನ್ನೂ ನೀಡುವ ಮೂಲಕ ಕಿಸಾನ್ ದಿವಸ್‌ಅನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ.

23-12-2021
Kp Pg 14